ಅಪರಂಜಿ

ಜುಲೈ 2006

ತಿಳಿನಗೆಯ ಕಾರಂಜಿ



ಪ್ರಕಾಶ್

ಬಾಗೂರು ಚಂದ್ರು

ಎನ್. ಪ್ರಹ್ಲಾದರಾವ್

ಗೋಪಾಲಿ

ಪ್ರಭಾ

ಗೋಪಾಲಕೃಷ್ಣ

ನೀರಗುಂದ ಕೇಶವಮೂರ್ತಿರಾವ್

ಬೇಲೂರು ರಾಮಮೂರ್ತಿ

ವಿ. ಪ್ರಾಣೇಶ್‌ರಾವ್

ಕು.ಕ.

ಎನ್. ರಾಮನಾಥ್

ದಂನಳಿ

ಬಿಡಿ ಪ್ರತಿ: ರೂ. 10.00

With Best Compliments from:

SVR Agencies

No. 2, 3rd Cross, Kalasipalyam,
New Extention
Bangalore - 560 002.

Grams : Equipments	:	Tel : 2222301 Fax : 080-2224497
Distributors For	:	ASPEE Sprayers and Dusters for Agriculture And Horticulture.
CONSIGNMENT AGENTS FOR	:	M/S DSM ENGINEERING PLASTICS (INDIA) PVT. LTD. Thermoplastic Ployster Granules (CENKITE) Polyamide Granules (CENKALON)



ಅಪರಂಜಿ

ತಿಳಿನಗೆಯ ಕಾರಂಜಿ



ಸಂಪಾದಕ ಮಂಡಳಿ
ಶ್ರೀ ಎಂ. ಶಿವಕುಮಾರ್
ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ
ಉಪಸಂಪಾದಕರು
ಶ್ರೀ ಬಾಗೂರು ಚಂದ್ರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಅ.ರಾ.ಸೇ.

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....



ಸಂಪುಟ 23 ಸಂಚಿಕೆ - 10
ಜುಲೈ - 2006

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080-23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068.



ಂ ಪ್ರಕಾಶ್

ವಕೀಲರ ವೃತ್ತಿ ಎಲ್ಲಕ್ಕಿಂತ ವಿಭಿನ್ನ

- ಹೇಳಿಕೆ

ಹೌದು, ಅದೇ ಕಷ್ಟ!!

★★★

ದೆಹಲಿಯ ಅಪೋಲೋ ಆಸ್ಪತ್ರೆಯ ವಿರುದ್ಧ ಮೊಕದ್ದಮೆ ದಾಖಲು

- ಸುದ್ದಿ

ಆಸ್ಪತ್ರೆಗೇ 'ಕೊಕ್ಕೇ'ನ್ ಹಾಕಿದಂತಾಯಿತು!!

★★★

ಸಾಫ್ಟ್‌ವೇರ್ ಎಂಜಿನಿಯರ್ ಮಹಿಳೆಗೆ ಅಪರೂಪದ ಚತುರ್ವಳಿ!!

- ಸುದ್ದಿ

Number of copies ಅನ್ನೋ ಕಡೆ
ನಾಲ್ಕು ಅಂತ ಬಟನ್ ಒತ್ತಿದರೇನೋ!!

★★★

ಸಿದ್ದರಾಮಯ್ಯ ಕಾಂಗ್ರೆಸ್ ಸೇರ್ಪಡೆಗೆ "ಅಖಾಡ" ಸಜ್ಜು

ಅರ್ಥವಾಯಿತು!!

★★★

ಆಡಳಿತದಲ್ಲಿ ಜನಪ್ರತಿನಿಧಿಗಳ ಹಸ್ತಕ್ಷೇಪ ಸರಿಯೇ?

ಅವರು ಜನಪ್ರತಿನಿಧಿಗಳು ಎಂದು ಇದುವರೆಗೂ ಸಾಬೀತಾಗಿಲ್ಲ!!

★★★

ಏರ್‌ಪೋರ್ಟ್ ರಸ್ತೆ 45 ದಿನಗಳಲ್ಲಿ ದುರಸ್ತಿ

- ಸುದ್ದಿ

'ಗಗನ-ಕುಸುಮ' ಅಂದರೆ ಇದೇ!!

★★★

'ಧರ್ಮವನ್ನು ವ್ಯವಹಾರಕ್ಕೆ ಹತ್ತಿರ, ಆಚರಣೆಗೆ ದೂರ ಪರಿಪಾಠ ಸಲ್ಲ'

- ಶ್ರೀ ಹೆಗಡೆ

ಧರ್ಮಯುಕ್ತವಾದ ಮಾತು!!

★★★

ಲಲ್ಲೂ ಪ್ರಸಾದ್ ಹುಟ್ಟಿದ ದಿನ ಗೊತ್ತಿಲ್ಲ

- ಸುದ್ದಿ

ಅವರಿಗೆ ''ಹುಟ್ಟಿದ ಹಬ್ಬ'' ಮಾಡೋದು ಅಸಾಧ್ಯ!

★★★



ಶುಭಾಶಯಗಳೊಂದಿಗೆ


ಪ್ರಭಾ ಕಣ್ಣಿನ ಆಸ್ಪತ್ರೆ
ಮತ್ತು
ಸಂಶೋಧನಾ ಕೇಂದ್ರ

504, 40ನೇ ಅಡ್ಡರಸ್ತೆ, 7ನೇ ಬ್ಲಾಕ್,
ಜಯನಗರ, ಬೆಂಗಳೂರು - 560 070
ದೂರವಾಣಿ: 2634 4131, 41 / 2663 7041

ಮತ್ತು

ವಿಠಲ ಅಂತರರಾಷ್ಟ್ರೀಯ ನೇತ್ರಶಾಸ್ತ್ರಸಂಸ್ಥೆ

ನಂ. 1, 2ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ,
7ನೇ ಬ್ಲಾಕ್, ಬನಶಂಕರಿ 3ನೇ ಹಂತ,
ಹೊಸಕೆರೆಹಳ್ಳಿ, ಬೆಂಗಳೂರು - 560 085
ದೂರವಾಣಿ: 2672 2213/14/15/19



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

– ಬಾಗೂರು ಚಂದ್ರು

ನಮ್ಮ ತಲೆಮಾರಿನ ಕನ್ನಡ ಓದುಗರಿಗೆ ಸದಭಿರುಚಿಯ ಹಾಸ್ಯಸಾಹಿತ್ಯವನ್ನು ಪರಿಚಯ ಮಾಡಿಕೊಟ್ಟವರಲ್ಲಿ ಮುಖ್ಯರಾದವರು- ಪ. ರಮಾನಂದರಾಯರು, ನಾ. ಕಸ್ತೂರಿ, ಮತ್ತು ರಾ.ಶಿ. ಇವರಲ್ಲಿ ರಾ.ಶಿ. ಹಾಸ್ಯ ಲೇಖಕರ ಒಂದು ದೊಡ್ಡ ಗುಂಪನ್ನು ಕಟ್ಟಿ ಬೆಳೆಸಿದ್ದು ಈಗ ಸಾಹಿತ್ಯ ಚರಿತ್ರೆ. ಈ ಎಲ್ಲಾ ಲೇಖಕರು ಬರೆದದ್ದು ಸಾಧಾರಣವಾಗಿ ನಗೆಲೇಖನ ಅಥವ ಹರಟೆ ಪ್ರಕಾರಕ್ಕೆ ಸೇರುವ ಗದ್ಯ ಲೇಖನಗಳು.

ಹರಟೆಯ ಜೊತೆಜೊತೆಗೆ ಬೆಳೆದ ಇನ್ನೊಂದು ಗದ್ಯಪ್ರಕಾರ ಲಲಿತ ಪ್ರಬಂಧಗಳು. ತೀ.ನಂ.ಶ್ರೀ ಲಲಿತ ಪ್ರಬಂಧಗಳನ್ನು ಮಂದ್ರ ಶ್ರುತಿಯ ಭಾವಗೀತೆಗಳು ಎಂದು ಕರೆದರು. ಇದನ್ನೇ ವಿಸ್ತರಿಸಿ ಅ.ರಾ. ಮಿತ್ರ ಲಲಿತ ಪ್ರಬಂಧಗಳ ಮುಖ್ಯ ಲಕ್ಷಣಗಳನ್ನು: ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ, ಮರ್ಯಾದೆ ಮೀರದ ಹಾಸ್ಯ, ಭಾಷಾ ಸೌಷ್ಠವ, ಆತ್ಮನಿಷ್ಠತೆ, ಕೃತಕವಲ್ಲದ ಚಮತ್ಕಾರ, ವಾಚಕನೊಂದಿಗೆ ಸಾಮಿಪ್ಯ ಬಂಧನ, ವರ್ತಮಾನವನ್ನು ಹಳಿಯದೆ ಭವಿಷ್ಯತ್ತು- ಭೂತಗಳೊಡನೆ ನಡೆಸುವ ಚೆಲ್ಲಾಟ, ಗಟ್ಟಿಯಾದ ವ್ಯಾವಹಾರಿಕ ನೆಲೆಯಲ್ಲಿ ಡೇರೆ ಹೂಡುವ ಅಂತಃಕರಣ ಎಂದು ವರ್ಣಿಸಿದ್ದಾರೆ.

ಹರಟೆ ಮತ್ತು ಲಲಿತ ಪ್ರಬಂಧಗಳನ್ನು ಬೇರೆಬೇರೆ ಪ್ರಕಾರಗಳೆಂದು ಗುರುತಿಸಿದರೂ ಇವುಗಳಲ್ಲಿನ ನಡುವಿನ ವ್ಯತ್ಯಾಸ ತುಂಬಾ ತೆಳುವಾದದ್ದು. ಬಹುಶಃ ಒಂದು ಮುಖ್ಯ ವ್ಯತ್ಯಾಸ- ಲಲಿತ ಪ್ರಬಂಧಗಳನ್ನು ಹೆಚ್ಚಾಗಿ ಅಕಾಡೆಮಿಕ್ ಜನ, ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು ಬೆಳಸಿಕೊಂಡು ಬಂದಿದ್ದರೆ ಹರಟೆಗಾರರಲ್ಲಿ ಸಮಾಜದ ಎಲ್ಲಾ ವರ್ಗಗಳ ಜನರಿದ್ದಾರೆ.

ಎನ್. ಪ್ರಹ್ಲಾದರಾಯರ ನಾದ- ಕನ್ನಡದ ಒಂದು ಅತ್ಯುತ್ತಮ ಲಲಿತ ಪ್ರಬಂಧ ಎಂದು ನನ್ನ ನಂಬಿಕೆ. ಇದು ಲಲಿತ ಪ್ರಬಂಧದ ಮೇಲೆ ಹೇಳಿದ ಎಲ್ಲಾ ಉತ್ತಮ ಗುಣಗಳನ್ನೂ ಹೊಂದಿದೆ. ಮನೆಯ ಮಗುವಿಗೆ ಬೆಳ್ಳಿಗೆಜ್ಜೆ ತರುವ ಸಾಂಸಾರಿಕ ಜೀವನದಲ್ಲಿ ಸಂತೋಷಕೊಡುವ ಒಂದು ಸಣ್ಣ ಘಟನೆಯಿಂದ ಪ್ರಾರಂಭವಾಗುವ ಪ್ರಬಂಧ ಮುಂದೆ ನಾದದ ವಿವಿಧ ಆಯಾಮಗಳನ್ನು ಚರ್ಚಿಸುತ್ತದೆ. ಈ ಪ್ರಬಂಧ ಸದಭಿರುಚಿಗೆ ಒಂದು ಉತ್ತಮ ಉದಾಹರಣೆ. ಪ್ರಹ್ಲಾದರಾಯರ ಇಷ್ಟೇ ಆಹ್ಲಾದಕೊಡುವ ಇನ್ನೂ ಕೆಲವು ಪ್ರಬಂಧಗಳನ್ನು ಬರೆದಿದ್ದಾರೆ. ಆದರೆ ಅವರು ಒಟ್ಟು ಬರೆದಿರುವುದು ಕಡಿಮೆಯೇ.

ಇಲ್ಲಿ ನಾದ- ಪ್ರಬಂಧದ ಕೆಲವು ಭಾಗಗಳಿವೆ.

ನಾದ

- ಎನ್. ಪ್ರಹ್ಲಾದರಾವ್

''ಮಗುವಿನ ಕಾಲಿಗೆ ಒಂದು ಜೊತೆ ಗೆಜ್ಜೆ ತನ್ನಿ'' ಎಂದು ನನ್ನ ಹೆಂಡತಿ ಹೇಳಿದಾಗ ನನ್ನ ಹಿರಿಯ ಮಗಳು ನಡುವೆ ಬಾಯಿ ಹಾಕಿ ''ಥೂ ಹೋಗಮ್ಮ, ಈಗಿನ ಕಾಲದಲ್ಲಿ ಯಾರೂ ಮಕ್ಕಳಿಗೆ ಗೆಜ್ಜೆ ಹಾಕುವುದಿಲ್ಲ. ಶುದ್ಧ ಅಸಹ್ಯ, ಅದೆಲ್ಲ ಬೇಡ. ಇಷ್ಟೂ ತರುವ ಹಾಗಿದ್ದರೆ ಬೂಟ್ಸು ಕಾಲುಚೀಲ ತರಲಿ. ಈಗ ಬಾಟಾದವರು ಸಂದಕ್ ಚಪ್ಪಲಿಗಳನ್ನು ಮಾಡಿದ್ದಾರೆ. ಅವು ಬಹು ಚೆನ್ನ.'' ಎಂದಳು. ಮಕ್ಕಳ ಕಾಲಿಗೆ ಬೆಳ್ಳಿಯ ಗೆಜ್ಜೆಗಳನ್ನು ಕಟ್ಟುವುದು ಹಿಂದಿನಿಂದ ಬಂದ ಸಂಪ್ರದಾಯ. ಸಂಪ್ರದಾಯವನ್ನು ಮುರಿಯಬಾರದೆಂದೇ ಅದರಲ್ಲಿ ಅಪರಿಮಿತ ನಂಬಿಕೆಯನ್ನುಳ್ಳ ನನ್ನ ಹೆಂಡತಿ ಗೆಜ್ಜೆಗಾಗಿ ಒತ್ತಾಯ ಮಾಡಿದ್ದು. ಆದರೆ ನವನಾಗರಿಕಳಾದ ನನ್ನ ಮಗಳಿಗೆ ಅದು ಹಿಡಿಸದು. ಈ ವಿಷಯದಲ್ಲಿ ನನ್ನ ಅಭಿಪ್ರಾಯವೇ ಬೇರೆ, ಮಕ್ಕಳಿಗೆ ಆದಷ್ಟು ಕಡಿಮೆ ಅಲಂಕಾರ ಮಾಡಬೇಕು ಎಂಬ ಅಂಶವನ್ನೇನೋ ನಾನು ಒಪ್ಪುತ್ತೇನೆ. ಆದರೆ ಗೆಜ್ಜೆ ಕೇವಲ ಅಲಂಕಾರ ಮಾತ್ರವಲ್ಲ, ಅದಕ್ಕಿಂತ ಹೆಚ್ಚಿನ ಯೋಗ್ಯತೆ ಗೆಜ್ಜೆಗೆ ಇದೆ. ಸಣ್ಣ ಸಣ್ಣ ಬೆಳ್ಳಿಯ ಗೆಜ್ಜೆಯನ್ನು ಕಟ್ಟಿದಾಗ ಮಗು ಕಾಲಿಟ್ಟರಾಯಿತು. ಘಿಲ್ ಘಿಲ್ ಎಂದು ಬಹು ಮಧುರವಾದ ಶಬ್ದ ಕೇಳಿಬರುತ್ತದೆ. ಅದು ನಿಜವಾಗಿಯೂ ನನಗೆ ಬಹು ಪ್ರಿಯ. ನಮ್ಮೆಲ್ಲರಿಗೂ ಅದು ಪ್ರಿಯ. ಅಷ್ಟೇ ಅಲ್ಲ, ಗೆಜ್ಜೆ ತೊಟ್ಟ ಮಗುವಿಗೂ ಪ್ರಿಯ. ಗೆಜ್ಜೆಯ ದನಿಯಿಂದ ಉತ್ತೇಜನಗೊಂಡು ಮಗು ಮನೆತುಂಬ ಓಡಾಡುತ್ತದೆ, ಕುಣಿಯುತ್ತದೆ. ಕ್ಷಣ ಮಾತ್ರದಲ್ಲಿ ನೀರಸ ಮೌನದಿಂದ ಮಂಕಾದ ಮನೆ ಘಿಲ್ ಘಿಲ್ ಎಂಬ ಶಬ್ದದಿಂದ ತುಂಬಿಹೋಗುತ್ತದೆ. ಗೆಜ್ಜೆಯ ನಾದ ಮಾಧುರ್ಯವನ್ನು ಗಮನಿಸಿದ ಹಿರಿಯರು ಸಂಗೀತದಲ್ಲೂ ನೃತ್ಯದಲ್ಲೂ ಅದಕ್ಕೆ ಅಗ್ರಸ್ಥಾನವನ್ನು ಕೊಟ್ಟಿದ್ದಾರೆ. ತಾಳ ಪ್ರಧಾನವಾದ ಭರತನಾಟ್ಯದ ಗತ್ತು ಇರುವುದೆಲ್ಲ ಕಾಲ ಗೆಜ್ಜೆಯಲ್ಲಿ. ಗೆಜ್ಜೆಯನ್ನು ಸಂಸ್ಕೃತದಲ್ಲಿ ಕಿಂಕಿಣೀ ಎನ್ನುತ್ತಾರೆ. ಬಹುಶಃ ಕಿಣಿ ಕಿಣಿ ಎಂಬ ಅದರ ನಾದದಿಂದಲೇ ಅದಕ್ಕೆ ಆ ಹೆಸರು ಬಂದಿರಬೇಕು. ನನ್ನ ಮಗಳು ಬೇಡವೆಂದರೂ ಗೆಜ್ಜೆಯನ್ನು ತಂದು ಮಗುವಿನ ಕಾಲಿಗೆ ಕಟ್ಟಿದುದಾಯಿತು ಅನ್ನೋಣ. ಅನಂತರ ಮಗುವಿನ ಉಲ್ಲಾಸವನ್ನು ಕಂಡು ಅವಳೂ ನನ್ನ ಮಾತನ್ನು ಒಪ್ಪಿದಳು.

ನಮ್ಮ ಚಾಮರಸ ತನ್ನ ಪ್ರಭುಲಿಂಗ ಲೀಲೆಯಲ್ಲಿ ಮಾಯಾದೇವಿಯ ಬಾಲ್ಯವನ್ನು ವರ್ಣಿಸುತ್ತ ಬಂಗಾರದ ತೊಟ್ಟಿಲಲ್ಲಿ ಅಂಗಾತವಾಗಿ ಮಲಗಿದ ಮಗು ಕಾಲುಗಳನ್ನು ಒದರಿದಾಗ ಅವಕ್ಕೆ ಕಟ್ಟಿದ ಚಿನ್ನದ ಕಿರುಗೆಜ್ಜೆಗಳು ಕಿಣಕಿಣ ಎಂದು ಶಬ್ದ ಮಾಡಲಾಗಿ ಹಿರಿಹಿರಿ ಹಿಗ್ಗುತ್ತ ಮತ್ತೆ ಮತ್ತೆ ಅದೇ ರೀತಿ ಕಾಲುಗಳನ್ನು ಅಲುಗಿಸಿ ಗೆಜ್ಜೆಯ ಮಧುರ ನಾದವನ್ನು ಸವಿಯುತ್ತಿತ್ತೆಂದು ಹೇಳುತ್ತಾನೆ. ಮಕ್ಕಳೆಲ್ಲ ಹಾಗೆಯೆ. ನಾದಪ್ರಿಯರು. ನಾದಲೋಲರು. ಅಳುವುದೂ ಅರಚುವುದೂ ಅವಕ್ಕೊಂದು ಆಟ. ಕೇಕೆ ಹಾಕುತ್ತವೆ.

ನಗುತ್ತವೆ. ಕುಟ್ಟುತ್ತವೆ. ತಟ್ಟೆಯನ್ನು ಢಣಾರೆಂದು ಕೆಡವುತ್ತವೆ. ಕೈಯ ಕೋಲಿನಿಂದ ಸಿಕ್ಕ ವಸ್ತುಗಳನ್ನೆಲ್ಲ ಬಡಿಯುತ್ತವೆ. ಉಂಟಾಗುವ ಶಬ್ದದಿಂದ ಬೆಚ್ಚಿ ಕಣ್ಣು ಮುಚ್ಚುತ್ತವೆ. ಕೆಲವು ಬಾರಿ ಹಿರಿ ಹಿರಿ ಹಿಗ್ಗಿ ಮತ್ತೆ ಬಾರಿಸುತ್ತವೆ. ರಾಗ ಎಳೆಯುತ್ತವೆ. ಹಾಡುತ್ತವೆ. ಹಾಡದ ಹೊರತೂ ಅಳುವನ್ನು ನಿಲ್ಲಿಸಿ ಮಲಗುವುದಿಲ್ಲ. ಹೀಗೆ ಮಾಡಿ ಮಾಡಿ ತಮ್ಮ ನಾದಪರವಾದ ರಸಿಕತೆಯನ್ನು ಅವು ರೂಪಿಸಿಕೊಳ್ಳುತ್ತವೆ. ಪ್ರಿಯ ಯಾವುದು ಕರ್ಕಶ ಯಾವುದು ಎಂಬುದನ್ನು ತಿಳಿಯುತ್ತವೆ. ಶಬ್ದದ ವಿಚಾರದಲ್ಲಿ ಎಳೆತನದಿಂದಲೇ ಮಕ್ಕಳ ಸೂಕ್ಷ್ಮ ರಸಿಕತೆಯನ್ನು ಕುದುರಿಸುವುದು ಅತ್ಯಗತ್ಯ.

ನಾನು ಶಬ್ದದ ವಿಚಾರದಲ್ಲಿ ಸಾಕಷ್ಟು ಚುರುಕು. ಮೊದಲಿನಿಂದಲೂ ಹಾಗೆಯೆ. ಅಗತ್ಯವಿಲ್ಲದೆ ಗಡುಸಾಗಿ ಮಾತನಾಡಲು ನನ್ನಿಂದಾಗದು. ಕರ್ಕಶವಾಗಿ ಅರಚುವವರನ್ನು ವಿಕಾರವಾಗಿ ಶಬ್ದ ಮಾಡುವವರನ್ನು ನಾನು ಸಹಿಸಲಾರೆ. ಔಚಿತ್ಯವನ್ನು ಮೀರಿದಲ್ಲಿ ಶಬ್ದ ಕತ್ತಿಯಂತೆ ನಮ್ಮ ಹೃದಯವನ್ನು ಕತ್ತರಿಸಿಬಿಡುತ್ತದೆ. ಹಾಗೆಂದ ಮಾತ್ರಕ್ಕೇ ನಾನು ಯಾವಾಗಲೂ ಸ್ಮಶಾನಮೌನವನ್ನು ಬಯಸುತ್ತೇನೆಂದಲ್ಲ. ನನಗೆ ನಾದ ಬೇಕು, ಶಬ್ದ ಬೇಕು, ಮಾತು ಬೇಕು, ಎಲ್ಲ ಬೇಕು. ಆದರೆ ಅದರಲ್ಲಿ ಒಂದು ವಿತರಣೆ ಇರಬೇಕು ಅಷ್ಟೆ.

ಈ ನನ್ನ ಚೂಪುಗಾರಿಕೆಗೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ಚಿಕ್ಕ ಮಗುವಿಗೆ ಬಿಸಿ ಬಿಸಿಯಾಗಿ ಎಣ್ಣೆನೀರು ಹಾಕಿ ಎರೆದು ನುರಿಯಾಗಿ ಒರೆಸಿ, ಹಣೆಗೆ ಕಪ್ಪಿಟ್ಟು ಸಾಂಬ್ರಾಣಿಯ ಹೊಗೆ ಹಾಕಿ ಬೆಚ್ಚಗೆ ತೊಟ್ಟಿಲಲ್ಲಿ ಮಲಗಿಸಿ ತೂಗಿದಾಗ ನಿದ್ದೆ ಮಾಡುತ್ತ ಅದು ಗುರಗುರ ಎಂದು ಶಬ್ದ ಮಾಡುತ್ತದಲ್ಲ ಅದನ್ನು ಕೇಳಲು ನನಗೆ ಬಹು ಇಷ್ಟ. ಗಂಟೆಗಟ್ಟಲೆ ಅದರ ಬಳಿ ಕೂತು ಆ ಗುರಗುರ ಶಬ್ದವನ್ನು ಕೇಳಿ ಸುಖಿಸಿದ್ದೇನೆ. ಆದರೆ ಇನ್ನೊಬ್ಬರ ಗೊರಕೆಯ ಶಬ್ದ ಮಾತ್ರ ಕಿವಿಗೆ ಶೂಲ.

ಎಲ್ಲ ಕಾಲದಲ್ಲೂ ಎಲ್ಲ ಜನರಿಗೂ ಆನಂದವನ್ನು ಕೊಡುವ ಇನ್ನೊಂದು ಶಬ್ದವೆಂದರೆ ಬಳೆಗಳದ್ದು. ಕಂಕಣ ಎಂಬ ಸಂಸ್ಕೃತ ಪದ ಬಳೆಯ ನಾದವನ್ನು ಅನುಕರಣ ಮಾಡಿ ತೋರಿಸುತ್ತಿದೆ. ಗೆಜ್ಜೆಯ ಶಬ್ದ ಕಿವಿಗೆ ಬಿದ್ದರೆ ತಾಯಿಗೆ ಹೇಗೆ ನೆಮ್ಮದಿಯೋ ಹಾಗೆ ಬಳೆಯ ಶಬ್ದ ಕಿವಿಗೆ ಬಿದ್ದರೆ ಗಂಡನಿಗೆ ಹಿತ. ನನ್ನ ಹೆಂಡತಿಯ ಸಂಪ್ರದಾಯ ಶರಣತೆಯಿಂದ ಈ ವಿಷಯದಲ್ಲೂ ಮಹದುಪಕಾರವಾಗಿದೆ. ಆಕೆ ಎಂದೂ ಪ್ಲಾಸ್ಟಿಕ್ ಅಥವಾ ರಬ್ಬರ್ ಬಳೆಗಳನ್ನು ಬಯಸಿದವಳಲ್ಲ. ಅವಳಿಗೆ ಅಚ್ಚಗೆಂಪಿನ ಗಾಜಿನ ಬಳೆಗಳೇ ಆಗಬೇಕು. ಅದೂ ನಾಲ್ಕು ನಾಲ್ಕಾದರೆ ಸಾಲದು. ಹನ್ನೆರಡು ಹನ್ನೆರಡಾಗಬೇಕು. ಆಕೆ ಸ್ವಭಾವತಃ ಮಾತು ಕಡಿಮೆ ಆಡುವವಳಾದರೂ ತನ್ನ ಬಳೆಗಳ ಶಬ್ದದಿಂದ ಯಾವಾಗಲೂ ಗಲಾಟೆ ಮಾಡುತ್ತಲೇ ಇರುತ್ತಾಳೆ. ಬಳೆ ಶಬ್ದವಾಗುತ್ತಿದ್ದರೆ ಹೆಂಡತಿ ಹತ್ತಿರವೇ ಇದ್ದಾಳೆ ಎಂಬ ಧೈರ್ಯ ತಾನೇತಾನಾಗಿ ಉಕ್ಕುತ್ತದೆ. ಹೆಂಡತಿ ಹತ್ತಿರವಿದ್ದರೆ ಜೋಬು ತುಂಬ ಹಣವಿದ್ದ ಹಾಗೆ. ಖರ್ಚು ಮಾಡಬೇಕು ಅಂತಲೇ ಅಲ್ಲ, ಇದೆ ಎಂಬ ಭಾವನೆಯೇ ಧೈರ್ಯವನ್ನು ತಂದುಕೊಡುತ್ತದೆ. ನನ್ನ ಬಹುಭಾಗದ ಲೇಖನಸಂಗೀತ ಸಾಗಿರುವುದೆಲ್ಲ ನನ್ನಾಕೆಯ ಕಂಕಣ ಕೃತಿಯನ್ನು ಆಶ್ರಯಿಸಿಯೇ!

ಮುಂಗಾರು ಮಳೆ ಪ್ರಾರಂಭವಾಗುವ ಕಾಲದಲ್ಲಿ ಯಾವಾಗ ಎಷ್ಟು ಮಳೆ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದ್ದಕ್ಕಿದ್ದ ಹಾಗೇ ಗುಡುಗಿ, ಮೋಡ ತುಂಬಿ, ತಟತಟತಟ ಎಂದು ಹನಿಯೊಡೆದು ನೀರು ಧಾರಾಕಾರವಾಗಿ ಸುರಿಯುತ್ತದೆ. ಆ ಕಾಲದಲ್ಲಿ ಎಂಥ ಮನೆಯಾದರೂ ಸೋರುತ್ತದೆ. ಏಕೆಂದರೆ ಹೆಂಚುಗಳು ಹಳೆಯವಾಗಿರುತ್ತವೆ. ಒಂದೆರಡು ಒಡೆದಿರುತ್ತವೆ. ಕೆಲವು ಅತ್ತ ಇತ್ತ ಜರುಗಿರುತ್ತವೆ. ಹೀಗಾಗಿ ಹಟಾತ್ತನೆ ನೀರು ಮನೆಯ ಒಳಕ್ಕೆ ಇಳಿಯಲು ಪ್ರಾರಂಭವಾಗುತ್ತದೆ. ಆಗ ಮನೆಯವರು ಸೋರುವಲ್ಲಿ ಒಂದೆರಡು ಪಾತ್ರೆಗಳನ್ನಿಡುತ್ತಾರೆ. ಹಾಗೆ ಇಟ್ಟಾಗ ಹನಿಹನಿಯಾಗಿ ನೀರು ಪಾತ್ರೆಯಲ್ಲಿ ಬಿದ್ದು ಟಣ್ ಟಣ್ ಟಣ್ ಎಂದು ಶಬ್ದವಾಗುತ್ತದೆ. ಅದನ್ನು ಕೇಳಲು ನನಗೆ ಬಹಳ ಇಷ್ಟ. ಸೋರಿ ಮನೆ ನೆನೆದರೂ ಪರವಾಗಿಲ್ಲ. ಹತ್ತು ಪಾತ್ರೆಗಳಲ್ಲೂ ಒಂದೇ ಕಾಲದಲ್ಲಿ ನೀರು ತೊಟ್ಟಿಕ್ಕಿ ಟಣ್ ಟಣ್ ಎಂದು ಶಬ್ದವಾಗುತ್ತಿದ್ದರೆ ನಾದ ರೂಪಿಗಳಾದ ಅಪ್ಸರೆಯರು ಮಳೆಯೊಡನೆ ನನ್ನ ಮನೆಗಿಳಿದು ಬಂದು ಸಡಗರದಿಂದ ಓಡಾಡುತ್ತಿರುವಂತೆ ನನಗನ್ನಿಸುತ್ತದೆ. ಮಳೆ ಬಂದರೆ ಕೆಟ್ಟದೆ ಎಂದು ನಮ್ಮವರು ಅಷ್ಟಲ್ಲದೆ ಹೇಳಿದ್ದಾರೆಯೆ! ಜೋರ್ರಾ ಎಂದು ಕುಂಭದ್ರೋಣ ವರ್ಷವಾಗುವಾಗ ಈ ನಾದದ ಸೊಗಸು ಕಾಣುವುದಿಲ್ಲ. ನೀರು ಬರುವ ಮೊದಲು ನಲ್ಲಿಯೂ ಬುಸ ಬುಸ ಎಂದು ಶಬ್ದ ಮಾಡುತ್ತದೆ. ಸದ್ಯ ನಮ್ಮ ನಲ್ಲಿಯಲ್ಲಿಯೂ ನೀರು ಬಂತಲ್ಲ ಎಂದು ಸಂತೋಷಪಡಬೇಕೇ ಹೊರತು ಅದು ಮಾಡುವ ಶಬ್ದವನ್ನು ಕೇಳಿ ಯಾರೂ ಸಂತೋಷಪಡರು.

ಗೆಜ್ಜೆಯದು ಲಘು ಲಾಲಿತ್ಯವಾದರೆ ಘಂಟೆಯದು ಘನ ಗಾಂಭೀರ್ಯ. ಗೆಜ್ಜೆ ನಮ್ಮ ಚೇತನವನ್ನು ಭೂಮಿಗೆ ಎಳೆದರೆ ಘಂಟಾನಾದ ನಮ್ಮನ್ನು ಸ್ವರ್ಗದತ್ತ ಏರಿಸುತ್ತದೆ. ಕಂಚಿನ ದೊಡ್ಡ ಘಂಟೆಯನ್ನು ರೂಪಿಸಿದ ಶಿಲ್ಪಿ ಎಂಥ ದೊಡ್ಡ ಕೆಲಸವನ್ನು ಮಾಡಿದ್ದಾನೆ! ಹಳೆಯ ದೇವಾಲಯಗಳಲ್ಲಿ ಮಿಣುಕು ದೀಪದ ಅಸ್ಪಷ್ಟತೆಯ ಮಧ್ಯೆ ಕರ್ಪೂರ ಮತ್ತು ಊದುಬತ್ತಿಯ ಸುವಾಸನೆ ಹರಡುತ್ತಿರುವಾಗ ಢಣಾರ್ ಢಣಾರ್ ಎಂದು ಘಂಟಾನಾದವಾಗುತ್ತಿದ್ದರೆ ಭಕ್ತಾದಿಗಳ ಮನಸ್ಸು ಅಯಾಚಿತವಾಗಿ ಭವ್ಯತೆಗೆ ಏರುತ್ತದೆ. ಜಾಗಟೆ ಮತ್ತು ಶಂಖಗಳ ಉದ್ದೇಶವೂ ಇದೇ. ತೆಳುವಾದ ಜಗನ್ನಾಥನ ಜಾಗಟೆಯನ್ನು ಹಗುರವಾದ ಮರದ ತುಂಡಿನಿಂದ ಬಡಿಯುತ್ತಿದ್ದರೆ ಬರುವ ನಾದ ಎಂಥ ದಿವ್ಯವಾದುದು. ನೀಳವಾದ ಶಂಖನಾದವೂ ಅಷ್ಟೆ. ಆದ್ದರಿಂದಲೇ ನಮ್ಮ ಹಿರಿಯರು ಇವನ್ನು ಪೂಜಾವಿಧಿಯ ಮುಖ್ಯ ಅಂಗಗಳನ್ನಾಗಿ ಸ್ವೀಕರಿಸಿದ್ದಾರೆ. ಈ ದೃಷ್ಟಿಯಿಂದ ಕ್ರೈಸ್ತ ದೇವಾಲಯಗಳ ಎತ್ತರವನ್ನೂ ಅಲ್ಲಿನ ದೊಡ್ಡ ಘಂಟೆಯ ನಾದವನ್ನೂ ನಾವು ಪ್ರಶಂಸೆ ಮಾಡಲೇಬೇಕು. ಕೊನೆಗೆ ಅರ್ಧರಾತ್ರಿಯ ಮೌನ ಸಾಗರವನ್ನು ಮಥನ ಮಾಡಿ ಹನ್ನೆರಡು ಸಾರಿ ಢಣ್ ಢಣ್ ಎಂದು ಗಂಟೆ ಬಾರಿಸುವ ಗೋಪುರದ ಗಡಿಯಾರದ ಶಬ್ದ ಕೂಡ ನನ್ನಲ್ಲಿ ದಿವ್ಯಭಾವನೆಗಳನ್ನು ಉಕ್ಕಿಸುತ್ತದೆ.

ಮನುಷ್ಯನ ಈ ನಾದಪ್ರಿಯತೆಗೆ ಸಂಗೀತಶಾಸ್ತ್ರದ ಮೂಲವೆಂದು ನನಗನಿಸುತ್ತದೆ.

ತನ್ನ ರಸಿಕತೆಗೆ ಖಚಿತವಾದ ಒಂದು ರೂಪನ್ನು ಕೊಡಲು ಪ್ರಯತ್ನಿಸಿದಾಗ ನೃತ್ಯ ಸಂಗೀತ ಸಾಹಿತ್ಯ ಚಿತ್ರ ಶಿಲ್ಪ ಮೊದಲಾದ ಲಲಿತ ಕಲೆಗಳು ಹುಟ್ಟಿದುವು. ಅವುಗಳ ಉಗಮ ಮನುಷ್ಯರ ರಕ್ತದಲ್ಲಿ ಸೇರಿ ಬಂದದ್ದು. ಮಕ್ಕಳಲ್ಲಿ ನಾವು ಅದನ್ನು ಕಾಣುತ್ತೇವೆ. ಇಂಪಾಗಿ ಶಾಸ್ತ್ರೀಯವಾಗಿ ಹಾಡುವುದು ಎಲ್ಲರಿಂದಲೂ ಸಾಧ್ಯವಾಗತಕ್ಕದ್ದಲ್ಲ, ಅದನ್ನು ಒಪ್ಪೋಣ. ಆದರೆ ಸಂಗೀತವನ್ನು ನಿಜವಾದ ಅಭಿರುಚಿಯಿಂದ ಆಸ್ವಾದನೆ ಮಾಡಿ ಸುಖಿಸುವ ಮನೋಧರ್ಮ ಎಲ್ಲರಲ್ಲೂ ಇರಬೇಕಲ್ಲವೆ? ಅಂಥ ಗುಣವಿಲ್ಲದಲ್ಲಿ ಮನುಷ್ಯನ ವ್ಯಕ್ತಿತ್ವ ಊನವಾಗಿದೆ ಎಂದೇ ತಿಳಿಯಬೇಕಾಗುತ್ತದೆ. ಎಂಥ ಸಾಧಾರಣ ಮನುಷ್ಯನೂ ಏಕಾಂತದಲ್ಲಿ ಕನ್ನಡಿಯ ಎದುರಿನಲ್ಲಿ ನಿಂತು ತನ್ನ ರೂಪನ್ನು ತಾನೇ ಮೆಚ್ಚಲು ಇಚ್ಛಿಸುತ್ತಾನೆ. ಅದೆಂಥವನೇ ಆಗಲಿ ಸ್ನಾನ ಮಾಡುವಾಗ ತನಗೆ ಹಿತವೆನಿಸುವ ರೀತಿಯಲ್ಲಿ ಹಾಡಲು, ಹಾಡಿ ಸುಖಿಸಲು ಬಯಸುತ್ತಾನೆ. ಈ ದೃಷ್ಟಿಯಿಂದ ನನಗೆ ಬಹು ಪ್ರಿಯವಾದ ನಾದ ಒಂದು ಇದೆ. ಅದು ನನ್ನ ಸಂಗೀತದ್ದೇ! ನಾನು ಏಕಾಂತದಲ್ಲಿ ಸ್ನಾನ ಮಾಡುವಾಗ ಗಟ್ಟಿಯಾಗಿ 'ಕೂಗು' ಸಂಗೀತದ್ದು!

ಏಕಕಾಲದಲ್ಲಿ ಮನಸ್ಸಿಗೆ ನೆಮ್ಮದಿಯನ್ನೂ ಅಷ್ಟೇ ತೀವ್ರವಾಗಿ ಭೀತಿಯನ್ನೂ ಕೊಡಬಲ್ಲ ಮತ್ತೊಂದು ಶಬ್ದವಿದೆ. ಅದನ್ನು ನಾನು ನೀವು ಎಲ್ಲ ಕೇಳಿದ್ದೇವೆ. ಹಗಲೆಲ್ಲ ಸದ್ದುಗದ್ದಲದಲ್ಲಿ ಅದ್ದಿಹೋದ ಜಗತ್ತು ರಾತ್ರಿಯಾಗುತ್ತಿದ್ದಂತೆ ನಿಧಾನವಾಗಿ ತಿಳಿಯಾಗಲು ಮೊದಲಾಗುತ್ತದೆ. ಒಂದೊಂದಾಗಿ ಶಬ್ದ ಅಡಗುತ್ತ ಬರುತ್ತದೆ. ಹತ್ತುಗಂಟೆಯ ಹೊತ್ತಿಗೆ ಗೆಜ್ಜೆ ಕಾಲಿನ ಮಗ ನಿದ್ದೆಮಾಡಿ ಇಂದ್ರನಂದನದಲ್ಲಿ ವಿಹರಿಸುತ್ತಿರುತ್ತಾನೆ. ಆಗ ತಾನೆ ಊಟ ಮುಗಿಸಿ ಕೈತೊಳೆದ ನನ್ನ ಹೆಂಡತಿ ನನಗೆ ಮಲಗಲು ಎಚ್ಚರಿಕೆ ಕೊಟ್ಟಂತೆ ಸೌಟನ್ನು ಢಣಾರ್ ಢಣಾರ್ ಎಂದು ಪಾತ್ರೆಗೆ ಬಡಿಯುತ್ತಾಳೆ. ಅದುವರೆಗಿನ ಗದ್ದಲದ ನಡುವೆಯೂ ನಿದ್ದೆಯ ಜೊಂಪಿನಲ್ಲಿದ್ದ ನನಗೆ ಅವಳು ಕೊಟ್ಟ ಎಚ್ಚರಿಕೆಯಿಂದ ಎಚ್ಚರವಾಗುತ್ತದೆ. ಎಲ್ಲ ಮಲಗಿ ನಿದ್ರಿಸುತ್ತಿರುವಾಗ ನಾನೊಬ್ಬ ಏಳುತ್ತೇನೆ. ಆಗ ಇದ್ದಕ್ಕಿದ್ದಂತೆ ನನ್ನ ಹೊದಿಕೆಯ ಒಳಗಡೆಯೇ ಡಗ್ ಡಗ್ ಡಗ್ ಎಂದು ಹೃದಯದ ಗಡಿಯಾರ ಬಡಿದುಕೊಳ್ಳುವುದರ ಅರಿವಾಗುತ್ತದೆ. ಹುಟ್ಟುವ ಘಳಿಗೆಯಿಂದ ಸಾಯುವವರೆಗೂ ಅವಿರತವಾಗಿ ಹೃದಯ ಸಂಪುಟದಲ್ಲಿ ಕುಳಿತ ಈ ಗಡಿಯಾರ ಶಬ್ದ ಮಾಡುತ್ತಲೇ ಇರುತ್ತದಾದರೂ ಯಾರೂ ಅದನ್ನು ಗಮನಿಸುವುದೇ ಇಲ್ಲ. ಶಬ್ದ ನಿಂತಾಗ ಮಾತ್ರ ಗಡಿಯಾರದ ಕಡೆ ಎಲ್ಲರ ಗಮನವೂ ಹರಿಯುತ್ತದೆ. ಪ್ರತಿದಿನದ ನಡುರಾತ್ರಿಯಲ್ಲಿ ಹೃದಯದ ತುಡಿತವನ್ನು ಕೇಳಿದಾಗಲೆಲ್ಲ ನನ್ನ ಗಡಿಯಾರ ಇನ್ನೂ ನಡೆಯುತ್ತಿದೆಯಲ್ಲ ಎಂಬ ನೆಮ್ಮದಿಯ ಭಾವ ಉಕ್ಕುತ್ತದೆ.

ಎಲ್ಲ ಶಬ್ದಗಳೂ ನನಗೆ ಪ್ರಿಯವಲ್ಲ. ಬಹು ಪ್ರಿಯವೆನಿಸಿದ ಕೆಲವು ಶಬ್ದಗಳ ಬಗ್ಗೆ ಹೇಳಿದ್ದಾಗಿದೆ. ಈಗ ನನಗೆ ಬಹು ಅಪ್ರಿಯವೆನಿಸುವ ಕೆಲವು ಶಬ್ದಗಳ ವಿಷಯವಾಗಿ ಎರಡು ಮಾತು ಹೇಳಬಯಸುತ್ತೇನೆ. ಹಾಳುಬಿದ್ದ ಮನೆಯ ಸೂರಿನಲ್ಲಿ ಕುಳಿತು ಹೆಪ್ಪುಗಟ್ಟಿದ ಕಗ್ಗತ್ತಲ ಮೌನವನ್ನೂ ಗೂಗೂ ಎಂದು ಕಲಕುವ ಗೂಬೆಯ ಕೂಗನ್ನು ಯಾರು ತಾನೆ ಮೆಚ್ಚಿಯಾರು! ಗೂಬೆಯನ್ನು ನಾನು ನೋಡಿಲ್ಲ. ನೋಡುವ ಆಸೆ ಇದೆ.

ನೋಡಲು ಪ್ರಯತ್ನ ಪಟ್ಟಿದ್ದೂ ಆಗಿದೆ. ಆದರೆ ಅದು ನೋಡಸಿಗುವುದಿಲ್ಲ. ಸಂಜೆ ಮೊಬ್ಬಿನಲ್ಲಿ ದೂರದಲ್ಲಿ ಕೂತ ಗೂಬೆಯ ಆಕಾರವನ್ನು ನೋಡಿದ್ದೇನಾದರೂ ಅದರ ಬೆಕ್ಕಿನಂಥ ಮುಖ ಹೇಗಿರುತ್ತದೆ ಎಂಬುದನ್ನು ನಾನು ಕಂಡಿಲ್ಲ. ಆದರೆ ಅನೇಕಾನೇಕ ಬಾರಿ ರಾತ್ರಿ ಹನ್ನೆರಡರ ಮೇಲೆ ಒಂದು ಎರಡು ಮೂರು ನಾಲ್ಕು ಗಂಟೆಗಳವರೆಗೂ ಗೂಬೆ ಕೂಗಿದ್ದನ್ನು ಕೇಳಿದ್ದೇನೆ. ಕೇಳಿ ಹೆದರಿದ್ದೇನೆ. ಅದರ ಕೂಗೇನೂ ಅಷ್ಟು ಕರ್ಕಶವಲ್ಲದಿದ್ದರೂ ಸುತ್ತಣ ಸನ್ನಿವೇಶ ಅದರ ಭೀಕರತೆಯನ್ನು ಹೆಚ್ಚು ಮಾಡುತ್ತದೆ. ಏನೇ ಹೇಳಿದರೂ ಗೂಬೆ ಗೂಬೆಯೆ. ನಡುಹಗಲಿನ ಉರಿಬಿಸಿಲಲ್ಲಿ ಇಡೀ ಊರೇ ಸುಟ್ಟು ಹಣ್ಣಾಗುತ್ತಿರುವಾಗ ಕಾಕಾ ಎಂದು ಕೂಗಿ ಕಿವಿಗಳನ್ನು ತಿವಿಯುವ ಕಾಗೆ ಇನ್ನೊಂದು ಪೀಡೆ. ಎಂಥದೇ ತರ್ಕದಿಂದಾಗಲಿ ನಾವು ಅದರ ರೂಪವನ್ನಾಗಲಿ ಕೂಗನ್ನಾಗಲಿ ಮೆಚ್ಚುವುದಕ್ಕಾಗುವುದಿಲ್ಲ. ಕೋಗಿಲೆಯ ಕೂಗು ಹೆಚ್ಚು ಹಿತವಾಗಬೇಕಾದರೆ ಗೂಬೆ ಕಾಗೆಗಳ ಕೂಗನ್ನು ಕೇಳಿದಾಗಲೆ.

ಮೌನವನ್ನು ಬಂಗಾರ ಎಂದು ಕರೆದ ನಮ್ಮ ಹಿರಿಯರು ನಾದವನ್ನು ಬ್ರಹ್ಮಪಟ್ಟಕ್ಕೆ ಏರಿಸಿದರು. ವಿಶ್ವವನ್ನು ಓಂಕಾರಮಯವೆಂದು ಬಣ್ಣಿಸಿದರು. ಈ ಸ್ತರಕ್ಕೆ ಏರಿದಾಗ ಮಾತೇ ಮೌನವಾಗುತ್ತದೆ. ಮೌನ ಮಾತನಾಡುತ್ತದೆ. ಕೇವಲ ತಂತಿಯನ್ನು ಮಿಡಿಯುವುದರಿಂದ, ವೀಣೆಯ ಮೇಲೆ ಪಿಟೀಲಿನ ಮೇಲೆ ಬೆರಳಾಡಿಸುವುದರಿಂದ ಕಲಾವಿದ ವಿವಿಧ ರಾಗಭಾವಗಳನ್ನು ಉಕ್ಕಿಸಬಲ್ಲ. ಹೃದಯವನ್ನು ಕರಗಿಸಬಲ್ಲ. ಬರೆಯುವ ಕವಿಗೆ ಕರ್ಣವೇ ಪ್ರಮಾಣ. ಸರಿಯಾದ ಅರ್ಥವನ್ನು ಕೊಡಬಲ್ಲ ಉಚಿತವಾದ ಪದಗಳನ್ನು ಜೋಡಿಸಿ ಅವನು ಕೃತಿರಚನೆ ಮಾಡುತ್ತಾನೆ. ಅಲ್ಲಿ ನಾವು ವಾಕ್ ಮತ್ತು ಅರ್ಥದ ಸಂಯೋಜನೆಯ ಮಾಟವನ್ನು ಕಾಣುತ್ತೇವೆ. ಪ್ರಕಟವಾಗಿ ವಾಚನ ಮಾಡಿದಾಗ ಉತ್ತಮ ಕಾವ್ಯ ನೀಡುವ ವಾಗರ್ಥಗಳ ಸೊಗಸು ಅದ್ವಿತೀಯವಾದುದು. ಓಂಕಾರದ ಶಂಖನಾದಕ್ಕಿಂತ ಕಿಂಚಿದೂನ ಎಂದು ಕವಿ ಬೇಂದ್ರೆಯವರು ಕಾವ್ಯಧರ್ಮವನ್ನು ಒಂದು ಕಡೆ ಬಣ್ಣಿಸಿದ್ದಾರೆ.

ಸಾಮೂಹಿಕವಾಗಿ ಇಂಥ ಸನ್ನಿವೇಶವನ್ನು ಬಯಸುವುದು ಕೇವಲ ಕಲ್ಪನೆಯಾದೀತು. ಏಕೆಂದರೆ ಇಂದಿನ ಸಮಾಜದಲ್ಲಿ ನಾವು ಇಂಥ ಪರಿಸರವನ್ನು ಕಾಣುತ್ತಿಲ್ಲ. ಎಲ್ಲಿ ನೋಡಲಿ ಅರಸಿಕತೆ ಕ್ರೌರ್ಯ ಅನಾಗರಿಕತೆ ಇವು ಕಾಣಬರುತ್ತಿವೆ. ಅದು ಶಬ್ದ ಪ್ರಪಂಚದಲ್ಲಂತೂ ಖಚಿತವಾಗಿ ಅಭಿವ್ಯಕ್ತಗೊಂಡಿದೆ. ಸಂಸ್ಕೃತಿಯ, ಕಲೆಯ ಹೆಸರಿನಲ್ಲಿ ಕೇವಲ ಗದ್ದಲ ಗಲಾಟೆಗಳ ಪ್ರಸಾರವಾಗುತ್ತಿದೆ. ಸಂಗೀತವನ್ನು ರೇಡಿಯೋ ಮನೆಮನೆಯ ಬಾಗಿಲಿಗೆ ತಂದಿತಾದರೂ ಒಳ್ಳೆಯ ಸಂಗೀತವನ್ನು ಬಯಸುವ ಮನೋಧರ್ಮವನ್ನದು ನಮ್ಮಿಂದ ಕಸಿದುಕೊಂಡುಬಿಟ್ಟಿದೆ. ಯಾರ ಕೊಂಕುಳಲ್ಲಿ ನೋಡಿದರೂ ಲಘುಸಂಗೀತದ ಹಾವಳಿ. ಕ್ಷೌರದಂಗಡಿಗಳಲ್ಲಿ ಉಪಹಾರ ಗೃಹಗಳಲ್ಲಿ ಉದ್ಯಾನವನಗಳಲ್ಲಿ ವಸ್ತುಪ್ರದರ್ಶನಗಳಲ್ಲಿ ಸಿನಿಮಾ ಮಂದಿರಗಳಲ್ಲಿ ಮದುವೆಯ ಚಪ್ಪರಗಳಲ್ಲಿ ನಿರಂತರ ಲಘು ಸಂಗೀತದ ಬಳುಕುಗಳ ಸುರಿಮಳೆ. ಸಾಲದ್ದಕ್ಕೆ ಧ್ವನಿವರ್ಧಕಗಳು ಬೇರೆ. ಜೀವನದ ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುತ್ತಿರುವ ಲಾಘವಕ್ಕೆ ಇದೂ ಒಂದು ಸಾಕ್ಷಿ. ನಾದ ಅಪ್ಸರೆಯ

ಮಟ್ಟದಿಂದ ಬ್ರಹ್ಮದ ಮಟ್ಟಕ್ಕೆ ಏರದಿದ್ದರೆ ಆಗುವುದೇ ಹೀಗೆ. ವಾದ್ಯಗಳಲ್ಲಿ ಮುಖವೀಣೆಯ ನಾದ ಎಷ್ಟು ಗಂಭೀರವೊ ಸ್ಯಾಕ್ಸೊಫೋನಿನ ದನಿ ಅಷ್ಟೊ ಅಷ್ಟು ಲಘು. ಬಹುಶಃ ಅದನ್ನು ಬಳಸಿಕೊಂಡಿರುವ ಕ್ರಮ ಅದಕ್ಕೆ ಕಾರಣವಾಗಿರಬಹುದು. ಪಾಶ್ಚಾತ್ಯರು ಅದನ್ನು ಜಾಜ್ ಸಂಗೀತಕ್ಕೆ ಅಳವಡಿಸಿಕೊಂಡಿದ್ದಾರೆ. ವಾದ್ಯ ಸಂಗೀತದ ಹೊಸ ಹೊಸ ಮಾದರಿಗಳನ್ನು ಅನುಕರಣೆ ಮಾಡುತ್ತಿರುವ ನಾವು ಆ ವಾದ್ಯವನ್ನು ಲಘು ಸಂಗೀತಕ್ಕೆ ಬಳಸಿಕೊಂಡಿದ್ದೇವೆ. ಈಚಿನ ಟ್ವಿಸ್ಟ್ ನೃತ್ಯಗಳ ಹಿನ್ನೆಲೆಯ ಸಂಗೀತದಲ್ಲಿ ಈ ವಾದ್ಯಕ್ಕೂ ಉಳಿದ ಬ್ಯಾಂಡ್ ವಾದ್ಯಗಳಿಗೂ ಪ್ರಾಶಸ್ತ್ಯ ಬಂದಿದೆ. ಏನೇ ಆಗಲಿ ಹೊಸ ಮಾದರಿಯ ಈ ಸಂಗೀತದಲ್ಲಿ ಮಾಧುರ್ಯದ ಭಾಗ ಕಡಿಮೆ. ಚಮತ್ಕಾರದ ಗದ್ದಲದ ಭಾಗವೇ ಹೆಚ್ಚು. ನೃತ್ಯದೊಂದಿಗೆ ಬೆರೆತಾಗ ಈ ಸಂಗೀತ ನಮ್ಮ ರಾಗಭಾವಗಳನ್ನು ಉದ್ರೇಕಿಸಬಲ್ಲದು. ಆದರೆ ಉಕ್ಕೇರಿದ ರಾಗಭಾವಗಳನ್ನು ರಸಸ್ತರಕ್ಕೆ ಏರಿಸುವ ಶಕ್ತಿ ಇದಕ್ಕಿಲ್ಲ. ಬರೀ ಪ್ರಶ್ನೆಗಳ ಸುರಿಮಳೆಯನ್ನು ಸುರಿದು ಉತ್ತರವನ್ನೇ ಹೇಳದ ಉಪಾಧ್ಯಾಯನಂತಿದೆ, ಈ ಸಂಗೀತದ ಧೋರಣೆ. ಮನಸ್ಸನ್ನು ಕಲಕಿ ಇಂದ್ರಿಯಾಸಕ್ತಿಗಳನ್ನು ಬೆಳಸುವುದೇ ಕಲೆಯ ಗುರಿಯಲ್ಲ. ನಿಜವಾದ ಕಲೆ ಕಲಕಿದ ಮನಸ್ಸನ್ನು ಶಾಂತಗೊಳಿಸಬೇಕು. ಉಪಶಮನವೇ ಅದರ ಗುರಿ. ಅದಿಲ್ಲದಲ್ಲಿ ಸ್ವೈರವೃತ್ತಿ, ಉನ್ಮಾದ, ಅತಿರೇಕಗಳು ಕಂಡುಬರುತ್ತವೆ. ಇವು ಎಂದಿಗೂ ಯಾವ ಜನಾಂಗವನ್ನೂ ಬೆಳೆಸಲಾರವು.

ನಾಟಕ ಕಣ್ಣೆದುರಿಗೆ ನಡೆಯುತ್ತಿದಾದ್ದರಿಂದ ನಾವು ಅನುಭವಿಸುವ ರಸಾನುಭವಕ್ಕೆ ನಟರ ಮಾತುಕತೆಗಳ ಜೊತೆಗೆ ಅವರ ನಟನೆಯೂ ಕಾರಣವಾಗುತ್ತದೆ. ಕೇವಲ ಶಬ್ದದ ಪರಿಣಾಮ ಏನು ಎಂದು ತಿಳಿಯಬೇಕಾದರೆ ನಾವು ಆಕಾಶವಾಣಿಯ ಕೆಲವು ಉತ್ತಮ ಕಾರ್ಯಕ್ರಮಗಳನ್ನು ಕೇಳಬೇಕು. ಆಕಾಶವಾಣಿಯ ನಾಟಕ ಸ್ಟುಡಿಯೋದಲ್ಲಿ ನಡೆಯುತ್ತದೆ. ಶ್ರೋತೃಗಳು ಇನ್ನೆಲ್ಲೆಲ್ಲಿಯೋ ತಮ್ಮ ತಮ್ಮ ರೇಡಿಯೋ ಯಂತ್ರಗಳ ಮುಂದೆ ಕೂತು ಆ ನಾಟಕವನ್ನು ಕೇಳುತ್ತಾರೆ ಮಾತ್ರ. ಆದ್ದರಿಂದ ರಂಗಮಂದಿರದ ನಾಟಕ ಎಷ್ಟೋ ವೇಳೆ ರೇಡಿಯೋ ನಾಟಕವಾಗುವುದಿಲ್ಲ. ರೇಡಿಯೋ ನಾಟಕದ ತಂತ್ರವೇ ಬೇರೆ. ಕೇವಲ ಶ್ರವಣೇಂದ್ರಿಯದ ಮೂಲಕ ಕಾವ್ಯದ, ನಾಟಕದ ಎಲ್ಲ ಸ್ವಾರಸ್ಯಗಳನ್ನೂ ರೇಡಿಯೋ ನಾಟಕ ಒದಗಿಸಬೇಕಾಗುತ್ತದೆ. ಶಬ್ದ ಅಥವಾ ನಾದವನ್ನು ಉಚಿತವಾಗಿ ಬಳಸಿದಾಗ ಎಂಥ ಅದ್ಭುತ ಪರಿಣಾಮ ಉಂಟಾಗಬಲ್ಲದು ಎಂಬುದಕ್ಕೆ ರೇಡಿಯೋ ಕಾರ್ಯಕ್ರಮ ಒಂದು ಪ್ರಬಲ ನಿದರ್ಶನವಾಗಿದೆ.

ಮಾನವ ಜೀವನ ನಾಟಕವೂ ಹೌದು, ರೇಡಿಯೋ ನಾಟಕವೂ ಹೌದು. ಕಣ್ಣು ಬಿಟ್ಟುಕೊಂಡು ಕೇಳಿದಾಗ ಗೆಜ್ಜೆ ಗಂಟೆ ಬಳೆ ಗೂಬೆ ಜೆಟ್ ವಿಮಾನ ಮಳೆ ಚಿಮ್ಮಂಡಿ ಇವು ತಮ್ಮ ವಿಚಿತ್ರ ನಾದಗಳಿಂದಲೂ ರೂಪ ಮತ್ತು ಅಭಿನಯದಿಂದಲೂ ನಮ್ಮನ್ನು ಆಕರ್ಷಿಸುತ್ತವೆ. ಕಣ್ಣುಮುಚ್ಚಿ ಕುಳಿತು ಶ್ರವಣೇಂದ್ರಿಯವನ್ನು ಮಾತ್ರ ತೆರೆದಾಗ ಜೀವನ ತನಗೆ ಸಹಜವಾದ ಪ್ರಿಯವೂ ಅಪ್ರಿಯವೂ ಆದ ನೂರಾರು ನಾದಗಳನ್ನು ಒದಗಿಸುತ್ತದೆ.

ಕಣ್ಣು ಮುಚ್ಚಿದ್ದರಿಂದ ಗಮನವೆಲ್ಲ ನಾದದ ಯೋಗ್ಯತಾ ನಿರ್ಣಯದ ಕಡೆಗೆ ಮಾತ್ರ ಓಡುತ್ತದೆ. ಕಿಂಕಣಿಯ ಲಘು ಝುಂಕೃತಿಯಿಂದ ಓಂಕಾರದ ಅಶ್ರುತವಾದರೂ ಅಭಿರಾಮತರವಾದ ನಾದಶ್ರೀಯವರೆಗಿನ ವಿವಿಧವೂ ಅನಂತವೂ ಆದ ಧ್ವನಿವನದಲ್ಲಿ ರಸಿಕನ ಮನಸ್ಸು ವಿಹರಿಸಬೇಕು. ಧ್ವನಿಶಕ್ತಿಯ ಅದ್ಭುತವೂ ರಮ್ಯವೂ ಆದ ಪರಿಣಾಮಗಳನ್ನು ಆತ ತೂಗಿ ನೋಡಬೇಕು. ಕ್ರಮೇಣ ಪ್ರಿಯವೂ ಸುಂದರವೂ ಕಲಾತ್ಮಕವೂ ಆದವುಗಳ ಕಡೆ ಅವನ ಒಲವು ಹೆಚ್ಚಬೇಕು. ಅದರಿಂದ ಇಂದಿನ ಜೀವನದ ಮುಕ್ಕಾಲು ಭಾಗದ ಕರ್ಕಶತೆಯೆಲ್ಲ ಕಡಿಮೆಯಾಗುತ್ತದೆ.

ಕೊರವಂಜಿ ಅಪರಂಜಿ ಟ್ರಸ್ಟ್

ಸಹಯೋಗ: ಸುರಾನಾ ಕಾಲೇಜು

ದಿವಂಗತ ರಾ.ಶಿ. ಅವರ

'ಮನೋನಂದನ'

ಹಾಗೂ

ಅಪರಂಜಿ ಶಿವು ಅವರ

'ಬ್ರೇಕಿಲ್ಲದ ಬೆಳ್ಳಿಯ ತೇರು'

ಕೃತಿಗಳ ಬಿಡುಗಡೆ ಸಮಾರಂಭ

ಬಿಡುಗಡೆ ಹಾಗೂ 'ಮನೋನಂದನ' ದ ಕುರಿತು ಎರಡು ಮಾತು.

ಪ್ರೊ॥ ಎಂ.ಎಸ್. ತಿಮ್ಮಪ್ಪ

(ವಿಶ್ರಾಂತ ಉಪಕುಲಪತಿಗಳು, ಬೆಂಗಳೂರು ವಿಶ್ವ ವಿದ್ಯಾನಿಲಯ)

'ಬೆಳ್ಳಿಯ ತೇರು' ಕುರಿತು ಎರಡು ಮಾತು

ಶ್ರೀ ಶ್ರೀನಿವಾಸ ವೈದ್ಯ

ಖ್ಯಾತ ಸಾಹಿತಿಗಳು ಹಾಗೂ ಚಿಂತಕರು,.

ಅಧ್ಯಕ್ಷತೆ

ಪ್ರೊ॥ ಕೆ.ಇ. ರಾಧಾಕೃಷ್ಣ

ಪ್ರಾಂಶುಪಾಲರು, ಸುರಾನಾ ಕಾಲೇಜು

16-07-2006 ಭಾನುವಾರ ಬೆಳಗ್ಗೆ 10 ಘಂಟೆಗೆ

ಸುರಾನಾ ಕಾಲೇಜಿನ ಸಭಾಂಗಣ, ಸೌಂತ್ ಎಂಡ್ ಸರ್ಕಲ್,

ಜಯನಗರ ಬೆಂಗಳೂರು 560011

ನಿಮಗೆ 'ಆದರದ ಸ್ವಾಗತ

ಪ್ರಕಾಶಕರು: ವಸಂತ ಪ್ರಕಾಶನ, ಬೆಂಗಳೂರು.

ಜೋಕುಮಾರಿಣಿ ಪ್ರಶಸ್ತಿ....!

– ಗೋಪಾಲಿ

ನಮ್ಮ ಚಂದ್ರಿಕಾ ರಾಣಿ, ಚಿಕ್ಕಂದಿನಿಂದಲೇ ಭಾರೀ ಘಾಟಿ ಅಂತ ನಮ್ಮ ಇಡೀ ವಂಶದಲ್ಲಿ ಹೆಸರುವಾಸಿಯಾಗಿದ್ದಳು. ನರ್ಸರಿ ಶಾಲೆಯಲ್ಲಿ ಇರಬೇಕಾದರೇನೆ ಯಾರದ್ದೋ ಹಾಡನ್ನ ಹೇಳಿ ತಾನೇ ಬರೆದು ಹಾಡಿದ್ದು ಅಂತ ಹೇಳಿಕೊಳ್ಳುವಷ್ಟು ಘಾಟಿತನವನ್ನು ಬೆಳೆಸಿಕೊಂಡಿದ್ದಳು. ನಾಲ್ಕನೇ ಕ್ಲಾಸಿಗೆ ಬಂದಾಗ ಅವರ ಶಾಲೆ ಮ್ಯಾಗಜೈನಿಗೆ ಪದ್ಯವೊಂದನ್ನು ಕಳಿಸಿದ್ದಳು. ಆ ಪದ್ಯ ಅಚ್ಚೂ ಆಗಿಬಿಟ್ಟಿತ್ತು. ಆಮೇಲೆ ಮೇಡಮ್ಮಿಗೆ ಅದು ಬೇಂದ್ರೆ ಪದ್ಯ ಇದ್ದ ಹಾಗಿದೆ ಅನಿಸಿತಂತೆ. ಚಂದ್ರೀನ ಬೆದರಿಸಿ ಕೇಳಿದರು. ಇವಳು ಹೌದು ಮನೇಲಿ ಒಂದು ಪುಸ್ತಕದಲ್ಲಿ ಈ ಪದ್ಯ ಸಿಕ್ಕಿತು ಅಂದಳಂತೆ. ಸದ್ಯಕ್ಕೆ ಮ್ಯಾಗಜೈನನ್ನು ಇನ್ನೂ ಯಾರಿಗೂ ಹಂಚಿರಲಿಲ್ಲ.

ಚಂದ್ರಿ ಹೀಗೆ ತುಂಬಾ ಚಿಕ್ಕವಳಿದ್ದಾಗಲೇ ಮುಂದೆ ತಾನು ಏನು ಆಗಬಹುದು ಎಂಬುವ ಮುನ್ಸೂಚನೆ ನೀಡಿದ್ದಳು. ಹೈಸ್ಕೂಲಿಗೆ ಬಂದಳಾ? ಯಾವುದೋ ರಾಜ್ಯಮಟ್ಟದ ಕವಿತಾ ಸ್ಪರ್ಧೆಯಾದಾಗ ಚಂದ್ರೀನೂ ಒಂದು ಪದ್ಯ ಗೀಚಿ ಕಳಿಸಿದ್ದಳು. ಅದಕ್ಕೆ ಮೊದಲನೇ ಬಹುಮಾನವೂ ಬಂತು! ಆದರೆ ಆಮೇಲೆ ಅದು ನರಸಿಂಹಸ್ವಾಮಿಯವರು ಚಂದ್ರಿಗಿಂತಲೂ ಮೊದಲೇ ಬರೆದುಬಿಟ್ಟಿದ್ದರು ಅಂತ ತೀರ್ಪುಗಾರರಿಗೆ ತಿಳೀತಂತೆ. ಇನ್ಮೇಲೆ ನಿನ್ನ ಕವನ ಯಾವುದನ್ನೂ ನಾವು ಈ ಸ್ಪರ್ಧೆಗೆ ಸ್ವೀಕರಿಸೋದಿಲ್ಲ ಅಂತ ಷರಾ ಹಾಕಿ ಬಹುಮಾನ ವಾಪಸ್ಸು ತಗೊಂಡುಬಿಟ್ಟರು; ಅದು ಚಂದ್ರಿಯ ಕೊನೇ ವರ್ಷ ಹೈಸ್ಕೂಲಿನಲ್ಲಿ; ಆದರಿಂದ ಅದರ ಎಫೆಕ್ಟು ಏನೂ ಆಗಲಿಲ್ಲ.

ಎಳೆಗರುಂ ಎತ್ತಾಗುವ ಹಾಗೆಯೇ ಚಂದ್ರಿ ಪೀಯೂಸೀಗೂ ಬಂದಳು. ಪೀಯೂಸೀಗೆ ಬಂದ ನಂತರ ಇವಳು ಒಂದು ಲೇಖನವನ್ನು ಬರೆದಳಂತೆ ಮತ್ತು ಯಥಾಪ್ರಕಾರ ಯಾವುದೋ ಕಾಂಪಿಟಿಷನ್ನಿಗೂ ಹೋಯಿತು ಹಾಗೂ ಅದೇ ಯಥಾಪ್ರಕಾರದ ರೀತಿಯಲ್ಲೇ ಬಹುಮಾನವನ್ನೂ ಗಿಟ್ಟಿಸಿಬಿಟ್ಟಿತು. ಸುಮಾರು ತಿಂಗಳು ಇಡೀ ನಮ್ಮ ವಂಶ ಖುಷಿಯಾಗಿತ್ತು. ಆದರೆ ಇದಕ್ಕೂ ಒಂದು ಬೆಳಿಗ್ಗೆ ಕಲ್ಲು ಬಿತ್ತು - ಈ ಸಲ ಇಂಗ್ಲಿಷಿನಲ್ಲಿ ಚಂದ್ರಿ ಬರೆದ ಲೇಖನವನ್ನು ವೋಡ್ ಹೌಸು ಅದೆಷ್ಟೋ ವರ್ಷಗಳ ಮೊದಲೇ ಬರೆದುಬಿಟ್ಟಿದ್ದನಂತೆ! ಹೊಸದಾಗಿ ಕಾಲೇಜಿಗೆ ಇಂಗ್ಲಿಷ್ ಮೇಡಮ್ಮಾಗಿ ಸೇರಿದ ಹುಡುಗಿ ಟೀಚರು ಹೇಳಿತಂತೆ.

ಈ ಅನುಭವಗಳಿಂದ ನಾವು ಅಂದರೆ ನಮ್ಮ ವಂಶದವರು ಒಂದು ತಾಕೀತು ಮಾಡಿದವು- ಚಂದ್ರೀಗೆ. "ಚಂದ್ರೀ ಪುಟ್ಟೀ. ಇನ್ಮೇಲೆ ಏನೂ ಗೀಚುಕ್ಕೆ ಅಂತ ಹೋಗಬೇಡಾ. ನೀನು ಏನೇ ಗೀಚಿದರೂ ಹಾಳಾದೋರು ಯಾರೋ ನಿನಗಿಂತ

ಮೊದಲೇ ಅದನ್ನ ಗೀಚಿ ಅವರ ಹೆಸರೂ ಹಾಕಿಕೊಂಡುಬಿಟ್ಟಿರುತ್ತಾರೆ. ನೀನು ಬರೇ ಮಾತಾಡು... ಅದೇ ಸಾಕು...'' ಅಂತ.

ನಂತರ ಚಂದ್ರಿ, ಮಾತಿಗೆ ಶುರು ಹಚ್ಚಿದಳು ನೋಡಿ - ಎಲ್ಲೇ ಹಾಸ್ಯಪಾಸ್ಯವಾದರೂ ಇವಳದ್ದೇ ಮುಂಚೂಣಿ ಮಾತು. ಕೈಲಾಸಮ್ಮನ ಜೋಕುಗಳು ಇವಳ ಸ್ವಂತದ್ದೇ ಆಯಿತು, ಕಸ್ತೂರ್ರಿ ಜೋಕೂ ಇವಳದ್ದೇ ಆಯಿತು, ಬೀಚಿ ಜೋಕೂ ಇವಳದ್ದೇ... ಹಾಗೆ ನೋಡಿದರೆ ಯಾರು ಎಲ್ಲೇ ಜೋಕು ಹೊಡೆದಿರಲು ಅದರಲ್ಲಿ ಚಂದ್ರಿ, ತನ್ನನ್ನ ತಾನೇ ಕಂಡುಕೊಂಡಳು. ಇವಳ ಬಾಯಿನಿಂದ ದೇಶ ವಿದೇಶ ಸುತ್ತಿದಳು, ಭಾಷಣ ಬಿಗಿದಳು, ಜನರನ್ನ ನಗಿಸಿದಳು... ಒಳ್ಳೇ ಜೋಕು ರಾಣಿ ಅಂಬೋ ಪದವೀ ಸಹಾ ಪಡೆದಳು! ಗೋರಿಯಲ್ಲಿದ್ದ ಹಲವಾರು ಪ್ರೇತಗಳು ವಿಲವಿಲ ಒದ್ದಾಡುವ ಹಾಗೆ ಅವರೆಲ್ಲರ ಜೋಕಿಗೆ ಇವಳೇ ವಾರಸುದಾರಳೂ ಆದಳು; ಅಷ್ಟೇ ಅಲ್ಲ, ಅವರ ಜೋಕುಗಳೆಲ್ಲವೂ ತನ್ನದೇ ಅಂತ ಪ್ರಚಾರವನ್ನೂ ಗಿಟ್ಟಿಸಿಬಿಟ್ಟಳು! ಮೊನ್ನೆ ನಮ್ಮ ಚಂದ್ರೀಗೆ ಅದೇನೋ ಪ್ರಶಸ್ತಿ ಕೊಟ್ಟಿದ್ದಾರಂತೆ - ಜೋಕುಮಾರಿಣಿ ಅಂತ!

ಜೀವಮಾನ ಪೂರ್ತಿ ಸೀರಿಯಸ್ಸಾಗಿರುವ ಇಡೀ ನಮ್ಮ ವಂಶ ಈಗ ಅಲ್ಲಿಲ್ಲಾದರೂ ಒಂದು ಬಿಲ ಇದೆಯೇ ಅಡಗಿಕೊಳ್ಳಲು ಅಂತ ಒಂದು ಬಿಲ ಹುಡುಕುತ್ತಾ ಇದೀವಿ. ನಿಮಗೆ ಯಾರಿಗಾದರೂ ಒಂದು ಬಿಲ ಕಾಣಿಸಿದರೆ.... ಪ್ಲೀಸ್!

ಹಾಸ್ಯ ಬ್ರಹ್ಮ ಟ್ರಸ್ಟ್

ಸಹಯೋಗ

ಸುರಾನಾ ಕಾಲೇಜು

ಕೈಲಾಸಂ ದಿನಾಚರಣೆ

ಕೈಲಾಸಂ ಸ್ಮರಣೆ, ಪ್ರಹಸನಗಳು, ಹಾಸ್ಯ ಚಟಾಕಿಗಳು, ಕೈಲಾಸಂ ಗೀತೆಗಳು

29-7-2006 ಸಂಜೆ 6 ರಿಂದ 8

ಸುರಾನಾ ಕಾಲೇಜು, ಜಯನಗರ, ಬೆಂಗಳೂರು - 560 011

ನಿಮಗೆ ಆದರದ ಸ್ವಾಗತ

“ವ್ಹಾಟ ಈಸ್ ಯುವರ್ ನಂಬರು?”

– ಪ್ರಭಾ

ಚಿಕ್ಕವನಿದ್ದಾಗ ಅಂದರೆ ಎಲ್ಕೇಜಿ ವಯಸ್ಸಿನಲ್ಲಿ ನನಗೆ ಶೂ ಹಾಕಲಿಲ್ಲ ನಮ್ಮಮ್ಮ. ಯಾಕಪ್ಪಾ ಹೀಗೆ ಅಂದರೆ ಆಗ ಎಲ್ಕೇಜಿ ಇರಲಿಲ್ಲ ಮತ್ತು ನಾನು ಶಾಲೆ ಮುಖ ನೋಡಿದ್ದೇ ನನಗೆ ಆರು ವರ್ಷವಾದಾಗ. ಏನಯ್ಯಾ ಆರು ವರ್ಷದವರೆಗೆ ನೀನು ಸ್ಕೂಲಿಗೆ ಸೇರಲಿಲ್ಲವೇ ಅಂತ ನೀವು ಕೇಳ್ತೀರೀ ಅಂತ ಗೊತ್ತು ಸಾರ್. ಸಾರ್ ಹಾಗೆ ನೋಡಿದರೆ ನಾನು ಆರುವರ್ಷವಾದಾಗ ಸ್ಕೂಲಿಗೆ ಸೇರಿದ್ದೇ ದೊಡ್ಡದು! ಕೆಲವರು ಎಂಟು ಹತ್ತು ಹನ್ನೆರಡು ವರ್ಷಕ್ಕೆ ಸ್ಕೂಲಿಗೆ ಸೇರಿದವರೂ ಇದ್ದಾರೆ. ಆದರೆ ಅವರ ವಯಸ್ಸು ಆರು ಅಂತಲೇ ರೆಕಾರ್ಡು ಆಗಿರತ್ತೆ. ಮೊನ್ನೆ ನಮ್ಮ ಹನುಮಂತಪ್ಪ ಅರವತ್ತನೇ ವರ್ಷದ ಶಾಂತಿ ಮಾಡಿಸಿಕೊಂಡ, ಅವನಿಗೆ ಇನ್ನೂ ಹತ್ತು ವರ್ಷ ಸರ್ವೀಸು ಇದೆ ಸಾರ್...!

ಶೂ ವಿಷಯ ಹೇಳ್ತಿದ್ದೆ ಅಲ್ಲವೇ? ನಾನು ಮೊದಲು ಶೂ ಹಾಕಿದ್ದು ಕಾಲೇಜಿಗೆ ಅಂದರೆ ಪೀಯೂಸೀಗ ಸೇರಿದ ಮೇಲೇನೇ. ಪೀಯೂಸೀನಲ್ಲಿ ಎನ್.ಸೀ.ಸಿ. ಅಂತ ಇತ್ತು ಸಾರ್. ಅಲ್ಲಿಗೆ ಸೇರಿದರೆ ಅವರೇ ಶೂ ಕೊಡ್ತಾರೆ ಅಂತ ನನ್ನ ಜತೆ ಓದೋ ಹುಡುಗರು ಹೇಳಿದ್ದರು. ಅಲ್ಲೀಗಂಟ ನಾನು ಶೂ ತೊಟ್ಟವನೇ ಅಲ್ಲ. ಕಾಲೇಜು ಸ್ಕೂಲಿನಲ್ಲಿ ನನ್ನ ಸಂಗಡ ಓದುತ್ತಿದ್ದ ಐಕಳು ಶೂ ತೊಟ್ಟು ಬಂದಾಗ ಅವರನ್ನ ಕಣ್ಣು ಬಾಯಿ ಬಿಟ್ಟುಕೊಂಡು ನೋಡ್ತಿದ್ದೆ ಮತ್ತು ಶೂಗೆ ಇವರಿಗೆಲ್ಲಾ ಕಾಸು ಎಲ್ಲಿಲಾ ಸಿಕತ್ತೈತೆ ಅಂತ ಯೋಚಿಸ್ತಿದ್ದೆ. ಎನ್.ಸಿ.ಸಿ.ಗೆ ಹುಡುಗ್ರು ಕ್ಯೂ ನಿಂತಿದ್ರಲ್ಲಾ ನಾನೂ ಅಲ್ಲೀಗೆ ಓದೆ ಕ್ಯೂ ನಾಗೆ ನಿಂತೆ. ಅದ್ಯಾರೋ ಮಿಲಿಟರಿ ಬಟ್ಟೆ ತೊಟ್ಟೋನು ಎಲ್ರನೂ ತೋಳು ಹಿಡಿದು ನೋಡಿ ಥತ್ ಅಂತ ಬೈದು ಚಲ್ರೇ ಅಂತ ಓಡಿಸ್ತಿದ್ದ. ನನ್ನ ತಾವಕ್ಕೂ ಬಂದ. ತೋಳು ಹಿಡಿದು ಅದುಮಿದ.

ಕ ಹಾಸೇ ಆಯಾ? ಅಂದ. ನಮ್ಮ ಆಸ್ಟಲ್ ಇತ್ತಲ್ಲಾ ಆ ಕಡೇಗೆ ಕೈ ಮಾಡಿ ತೋರಿಸಿದೆ. ಕಿಸಾ ಗಾಂವ್ ಅಂದ. ಅಪ್ಪಾ ಕನ್ನಡ ಬಿಟ್ಟು ಬೇರೆ ಬರಾಕಿಲ್ರೀ ಅಂದೆ. ಇಂಗ್ಲಿಷ್ ಬರ್ತಿತ್ತು - ಓದೋಕ್ಕೆ, ಬರೆಯೋಕ್ಕೆ. ಐದನೇ ಕ್ಲಾಸಿಂದ ಇಂಗ್ಲೀಷೂ ಕಲ್ತಿದ್ದೆ. ಆದರೆ ಮಾತಾಡುಕ್ಕೆ ಒಂಥರಾ ನಾಚಿಕೇನ್ರೀ. ವ್ಹಾ ಸೇರ್ಸಕಡೆ ವ್ಹಾಟ್ ಸೇರಿಸಿಬಿಡ್ತೀನಾ ಅಂತ ಭಯಾನ್ರೀ. ಈ ಭಯಕ್ಕೂ ಒಂದು ಕಾರ್ಣ ಐತ್ರೀ. ಪೀಯೂಸೀಗೆ ಸೇರಿದ ಮೊದಲನೇ ದಿನ ನಮಗೆಲ್ಲಾ ರಿಜಿಸ್ಟರು ನಂಬರು ಅಂತೇನೋ ಹೇಳಿದರು. ಎಸರು ಕರೆಯಾಕಿಲ್ಲಾ ನಂಬರು ಕೂಗ್ತಾರೆ. ನಂಬರು ಕೂಗ್ದಾಗ ಕೈ ಎತ್ತಿ ಪ್ರೆಸೆಂಟ್ ಅಂತನ್ನಬೇಕು ಅಂತ ನನ್ನ ಪಕ್ಕ ಕೂತೋನು ಏಳಿದ್ದ. ಆಕಡೆ ಕೂತೋನ ನಂಬರು ಏನು ಅಂತ ಕೇಳ್ಲಾ ಅಂತ ಎರಡನೇ ದಿನ ಹೇಳ್ದ. ಆಕಡೆ ಕೂತೋನು ಠಸ್ ಪುಸ್ ಅಂತ ಎಲ್ರ ತಾವವೂ ಇಂಗ್ಲೀಸಲ್ಲೇ ಮಾತು. ಅವನಿಗೆ ಕನ್ನಡ

ಬರಾಕಿಲ್ಲ ಅಂತ ಯಾರಿಗೇ ಆಗಲೀ ಅನಿಸಬೇಕು. ನನಗೂ ಅಂಗೇ ಅನಿಸಿತು. ಇಂಗ್ಲೀಷಲ್ಲೇ ಅವನ ನಂಬರು ಎಷ್ಟು ಅಂತ ಕೇಳಿದೆ - ಹೀಗೆ ''ವ್ಹಾಟ್ ಈಸ್ ಯುವರ್ ನಂಬರು?'' ಅಂದೆ.

ಆತ ಕಿಸಕ್ ಅಂತ ಹಲ್ಕಿಸಿದುಬಿಟ್ಟ. ''ವ್ಹಾ ಈಸ್ ಮೈ ನಂಬರ್? ಹಹ್ಹಹಹಾ...'' ಅಂದುಬಿಟ್ಟು ಇಡೀ ಕ್ಲಾಸಿಗೆ ವ್ಹಾ ಈಸ್ ಯುವರ್ ನಂಬರ್ ಅನ್ನೋ ವಾಕ್ಯವನ್ನ ಹರೀಬಿಟ್ಟ. ಅವತ್ತಿಂದ ಇಂಗ್ಲೀಸ್ನಾಗೆ ಏನಾರ ಮಾತಾಡ್ಬೇಕು ಅಂದರೆ ನನಗೆ ಅನ್ನೆರೆಡು ಒಡೆದು ಹೋಗ್ತೈತೆ. ಮಿಲಿಟರಿಯವನು ತೋಳು ಹಿಡಿದ ಅಂದನಲ್ಲಾ ಅವನ ಮುಖದಾಗೆ ಖುಸಿ ಕಾಣಿಸ್ತು. ರಾಗಿ ಮುದ್ದೆ ತಿಂತಿದ್ದೆ ಮರಕೋತಿ ಆಡ್ತಿದ್ದೆ. ದಿನಾ ಒಲಕ್ಕೆ ಅಂತ ಹತ್ತು ಮೈಲು ಅತ್ತ ಇತ್ತ ನಡೀತಿದ್ದೆ. ಸಂಜೆಗೆ ಆಂಜನೇಯನ ಗುಡೀ ತಾವ ಗದೆ ಆಡಿಸ್ತಿದ್ದೆ. ಅದರಿಂದ ತೋಳು ಗಟ್ಟಿ ಮುಟ್ಟಾಗಿತ್ತೇನೋ.... ದೂರದಲ್ಲಿದ್ದ ಇನ್ನೊಬ್ಬ ಮಿಲಿಟರಿ ಅವನನ್ನ ಕರೆದ.

''ಲಡ್ಕಾ ದೇಖೋ ಬೈಸೆಪ್ಸ್ ಕೈಸಾ ಹೈ ದೇಖೋ...'' ಅಂತ ನನ್ನ ತೋಳು ಅದುಮಿದ. ಅವನೂ ನನ್ನ ತೋಳು ಅದುಮಿದ, ಬಟ್ಟೆ ಬಿಚ್ಚಿಸಿ ನನ್ನ ಅಳತೆ ತಗೊಂಡ ಸೆಲೆಕ್ಟ್ ಆಗಿದೀಯಾ ಅಲ್ಲಿ ಹೋಗಿ ಯೂನಿಫಾರಮ್ಮು ತಗೋ ಅಂತ ರೂಮಿಗೆ ಕಳಿಸಿದ.

ರೂಮಿಗೆ ಓದ್ನಾ? ಅಲ್ಲಿ ಬರೀ ಬಟ್ಟೆ, ಬೆಲ್ಟು, ಶೂ, ಟೋಪಿ... ಹೀಗೆ. ನನ್ನ ಅಳತೇಗೆ ಆಗೋ ಪ್ಯಾಂಟು ಆರಿಸಿದೆ, ಶರಟು ತಗೊಂಡೆ, ಬೆಲ್ಟು ಅವರೇ ಕೊಟ್ಟರು, ಎರಡು ಜತೆ ಕಾಲುಚೀಲ ಕೊಟ್ಟರು. ಶೂ ಉದರ್ ಹೈ ದಾಲ್ ಕೆ ದೇಖೋ ಅಂದರು. ಇದ್ದಿದ್ದ ಶೂಗಳೆಲ್ಲವನ್ನೂ ಕಾಲಿಗೆ ತೂರಿಸಲು ಪ್ರಯತ್ನಿಸಿದೆ. ಯಾವುದೂ ಆಗಲಿಲ್ರೀ...!

ಒಂದೊಂದಾಗಿ ಶೂಗಳನ್ನು ತೆಗೆದು ನೀಡುತ್ತಿದ್ದ ಮತ್ತೊಬ್ಬ ಮಿಲಿಟರಿಯವನಿಗೆ ಒಂದು ರೀತಿಯ ಆಕ್ರೋಶ ಹುಟ್ಟಿಬಿಟ್ಟಿತು. ಅವನ ಇಪ್ಪತ್ತೈದು ವರ್ಷಗಳ ಸರ್ವೀಸಿನಲ್ಲಿಯೇ ಮೊಟ್ಟಮೊದಲೇ ಬಾರಿಗೆ ಮಿಲಿಟರಿಯವರು ತೊಡುವ ಶೂಗಿಂತಲೂ ದೊಡ್ಡ ಸೈಜಿನ ಕಾಲುಗಳನ್ನು ಅಲ್ಲ ಸಾರೀ ಪಾದಗಳನ್ನು ಹೊಂದಿರುವಂತಹ ಮಹೋದಯ (ಏ ಸಾಲೆ - ಅಂತ ಒಂದು ಪದ ಆತ ಉಪಯೋಗಿಸಿದ: ಅದರ ಅರ್ಥ ನನಗೆ ತಿಳೀದು) ಅವರಿಗೆ ಕಾಣ ಸಿಕ್ಕಿದನಂತೆ.

ಇದರ ಪರಿಣಾಮ ಬೇರೆೇ ರೀತಿಯಲ್ಲಿ ಆಯಿತು. ಇಡೀ ದೇಶದ ಮಿಲಿಟರಿಗೆ ಅವಮಾನ ಅಂತ ಅನಿಸಿಬಿಟ್ಟಿತಂತೆ - ಯಾವುದೋ ಯಕಃಶ್ಚಿತ್ ಹುಡುಗನ ಸೈಜಿನ ಶೋ ಗೋಡೋನಿನಲ್ಲಿ ಸಿಗಲಿಲ್ಲ ಎನ್ನುವುದು ಇಡೀ ದೇಶಕ್ಕಾದ ಅವಮಾನದ ಹಾಗೆ ಆತ ಹಾರಾಡಿಬಿಟ್ಟ; ಕೂಡಲೆ ನನ್ನನ್ನು ಕರೆದುಕೊಂಡು ನಗರದ ಆರೇಳು ಮಿಲಿಟರಿಯ ಎನ್.ಸಿ.ಸಿ.ಯ ಕಛೇರಿಗಳಿಗೆ ನುಗ್ಗಿದ. ಅಲ್ಲಿ ನನ್ನ ಕಾಲಿಗೆ ಶೂ ಹುಡುಕಿದ. ಒಂದೊಂದು ಮಳಿಗೆಯಲ್ಲೂ ನನ್ನ ಸೈಜಿನದ್ದು ಸಿಗದಿದ್ದಾಗ ಈತನ ರೋಷ ತಾರಕಕ್ಕೇರುತ್ತಿತ್ತು. ಏ ಕ್ಯಾ ದೇಶ ಹೈ? ಅಂತ ಕಣ್ಣಿನಲ್ಲಿಯೇ ಕಿಡಿ ಉದುರಿಸುತ್ತಿದ್ದ.

ಏಳನೇ ಕಛೇರಿಗೆ ಬಂದೆವು. ಅಲ್ಲಿದ್ದ ಮಿಲಿಟರಿಯವನು ಆಪ್ ಕ ಸೈಜ್ ಕ್ಯಾ? ಅಂದ. ಏಳುಕಡೆ ಇದೇ ಪ್ರಶ್ನೆ ಕೇಳಿದ್ದರಿಂದ ಸುಮಾರಾಗಿ ಅದಕ್ಕೆ ಉತ್ತರ ಬಾಯಿಪಾಠವಾಗಿತ್ತು. ತೇರಾ-ತರ್ಟೀನ್ ಅಂದೆ. ಕ್ಯಾ ಆಪ್ ಕಾ ಸೈಜ್ ತೇರಾ? ಅಂತ ಖುಷಿ ಪಟ್ಟ ಟಿಹರೋ ಅಂತ ಒಳಗೆ ನುಗ್ಗಿದ.

ಹತ್ತು ನಿಮಿಷದ ನಂತರ ಆಚೆ ಬಂದ. ಆತನ ಕೈಯಲ್ಲಿ ಒಂದು ಹಳೇ ಮಾಸಿಹೋದ ಶೂ ಬಾಕ್ಸು. ತುಂಬಾ ಹಿಂದೆ ಶೂಗಳಿಗೆ ಆರ್ಡರು ನೀಡಿದಾಗ ಅಂಗಡಿಯ ಶೋಕೇಸಿನಲ್ಲಿ ಒಂದು ಶೂ ಇಟ್ಟಿದ್ದರಂತೆ. ಅದೇ ಮೆಟೀರಿಯಲ್ಲಿನಲ್ಲಿ ಶೂ ತಯಾರಿಸಬೇಕು ಎಂದು ಇವರು ಕರಾರು ಮಾಡಿದ್ದರಂತೆ. ಅದನ್ನ ಶೂ ಸಪ್ಲೈ ಆದಾಗ ಪರೀಕ್ಷಿಸಲು ತಂದಿದ್ದರಂತೆ. ಈಗ ಆ ಶೂ ಹದಿಮೂರನೆ ಸೈಜೇ ಇರಬಹುದು ಅನಿಸಿ ಪೆಟ್ಟಿಗೆ ಸಮೇತ ಆಚೆ ತಂದ. ಆಶ್ಚರ್ಯವೇನೂಂತೀರಿ ಕಾಲಿಗೆ ಆ ಶೂ ಸರಿಹೋಗಬೇಕೇ? ಮಿಲಿಟರಿಯವರ ಮಾನ ಉಳೀತು ಅಂತ ಸೈನಿಕರ ಧಿರಿಸ್ಸು ತೊಟ್ಟವರಿಗೆ ಖುಷಿಯಾಯಿತು ಮತ್ತು ನನಗೆ ಮೊಟ್ಟಮೊದಲಬಾರಿಗೆ ಶೂ ತೊಡುವ ಅವಕಾಶ ಸಿಕ್ಕಿತು.

ಪೀಯೂಸಿಯ ಎರಡು ವರ್ಷವೂ ಇದೇ ಶೂ ತೊಟ್ಟೆ ಮತ್ತು ಎನ್.ಸಿ.ಸಿ. ಮುಗಿದ ನಂತರ ಆ ಶೂವನ್ನು ಎನ್.ಸಿ.ಸಿ. ಮುಖ್ಯಸ್ಥರು ನನಗೇ ಗಿಫ್ಟ್ ಆಗಿ ನೀಡಿದರು. ಡಿಗ್ರೀಗೆ ಸೇರಿದ ನಂತರ ನಾನು ಎನ್.ಸಿ.ಸಿ.ಗೆ ಹೋಗಲಿಲ್ಲ. ಇಡೀ ನನ್ನ ಕಾಲೇಜು ವಿದ್ಯಾಭ್ಯಾಸ - ಡಿಗ್ರಿ, ಪೋಸ್ಟ್ ಡಿಗ್ರೀ, ಲಾಯರಿಕೆ ಇವೆಲ್ಲವೂ ಈ ಒಂದು ಜತೆ ಶೂ ನಲ್ಲಿಯೇ ನಡೆದುಬಿಟ್ಟಿತು! ಇದು - ಈ ಶೂ - ನಾನು ನನ್ನ ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರುವವರೆಗೂ ಉಪಯೋಗಿಸಿದೆ. ಕೆಲಸಕ್ಕೆ ಸೇರಿದ ಮೇಲೆ ಆಗಲೂ ಅರವತ್ತು ಅಂಗಡಿ ಹುಡುಕಿ ನನ್ನ ಕಾಲಿನ ಸೈಜಿನ ಶೂ ಕೊಂಡುಕೊಂಡೆ. ಎನ್.ಸೀ.ಸಿ. ಯಾನೆ ಮಿಲಿಟರಿಯ ಹದಿಮೂರನೇ ನಂಬರಿನ ಶೂ ಕತೆ ಈಗ ಯಾಕೆ ಬಂತು ಅಂದರೆ ಮೊನ್ನೆ ನನ್ನ ಮನೆ ಅಟ್ಟ ಕ್ಲೀನಿಸಿದೆ. ಒಂದು ಪೆಟ್ಟಿಗೆಯಲ್ಲಿ ಈ ಶೂ ಬಚ್ಚಿಟ್ಟುಕೊಂಡಿತ್ತು ಮತ್ತು ನನ್ನ ಹಳೇ ನೆನಪುಗಳನ್ನು ಕೆದಕಿತು.

ಹದಿಮೂರನೇ ಶೂ ಇನ್ನೂ ನನ್ನ ಬಳಿಯಲ್ಲಿದೆ: ಅದರ ಜೊತೆ ಪಿಯೂಸಿಯಲ್ಲಿ ನನ್ನ ನಿಕ್ ನೇಮು ''ವ್ಹೂ ಈಸ್ ಯುವರ್ ನಂಬರು?'' ಕೂಡ ಈಗ ನೆನಪಿಗೆ ಬಂದು ಒಂದು ರೀತಿಯ ನಾಚಿಕೆ ಮತ್ತು ಅವಮಾನದ ನೆನಪನ್ನೂ ತಂದಿದೆ!

★★★

ಒಂದೇ ಒಂದು ಮಾತು....

- ಎಚ್. ಗೋಪಾಲಕೃಷ್ಣ

ತುಂಬಾ ಹಳೆಯ ಪರಿಚಯದ ಸ್ನೇಹಿತರೊಬ್ಬರು ಮೊನ್ನೆ ಸಿಕ್ಕಿದರು. ಅವರನ್ನ ನೋಡಿ ಆಗಲೇ ಹತ್ತಿರ ಹತ್ತಿರ 25-30 ವರ್ಷಗಳೇ ಆಗಿಬಿಟ್ಟಿತ್ತು. ಅಷ್ಟು ವರ್ಷದ ಹಿಂದಿನ ಗೆಳೆಯ ನಾನೇ ಹೌದೋ ಅಲ್ಲವೋ ಅಂತ ಅವರಿಗೆ ಗುಮಾನಿ ಬಂದಿತಂತೆ. ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ನನ್ನ ಹಿಂದೆ ಮೂರು ಮೂರು ಸುತ್ತು ಹಾಕಿದರಂತೆ: ನಾನು ಹೋದ ಅಂಗಡೀಗೆ ಬಂದರಂತೆ, ನಾನು ಹೊಕ್ಕ ಹೋಟಲಿನಲ್ಲಿ ನನ್ನ ಹಿಂದೆಯೇ ಇದ್ದರಂತೆ... ಹೀಗೆ ಹೊಂಚು ಹಾಕಿ ನಾನೇ ಆ ಹಳೆಯ ಗೆಳೆಯ ಅನ್ನುವುದನ್ನು ಖಾತ್ರಿ ಮಾಡಿಕೊಂಡರಂತೆ.

ನಂತರ ಬಸ್ ಸ್ಟಾಪಿನಲ್ಲಿ ಬಸ್ಸಿಗೆ ಕಾಯುತ್ತಿದ್ದ ನನ್ನ ಬೆನ್ನಿನ ಮೇಲೆ ತಟ್ಟಿದರಂತೆ. ಹಿಂದೆ ತಿರುಗಿದ ನಾನು ಒಂದೇ ಸೆಕೆಂಡಿನಲ್ಲಿ ಅವರ ಹೆಸರು ಹಿಡಿದು ಕೂಗಿ ಎಂದಿನ ಹಾಗೆ ಅವರ ಭುಜ ಬಳಸಿದೆ. ಇದು ಅವರಿಗೆ ತುಂಬಾ ಸಂತೋಷ ಕೊಟ್ಟಿತು - ಅಂತ ಅವರು ಹೇಳಿದರು. ಮೂವತ್ತು ವರ್ಷವಾಗಿತ್ತು ನಿನ್ನನ್ನ ನೋಡಿ, ಬೆಂಗಳೂರಿನಲ್ಲಿರೋನು, ಅದೇನು ಬದಲಾಗಿರ್ತಿಯೋ ಅಂತ ಅಂದುಕೊಂಡಿದ್ದೆ... ಹೀಗೆ ಮಾತನಾಡುತ್ತಾ ಹೋಟೆಲ್ಲು ಹೊಕ್ಕೆವು-ಇದೇನು ಇಲ್ಲಿ ಏನು ಮಾಡ್ತಿದ್ದೀರಿ ಈಗ? ಅಂತ ಕೇಳಿದೆ.


ಕಾಲೇಜು ಮುಗಿಸಿದ ನಂತರ ಸರ್ಕಾರೀ ಕೆಲಸ ಸೇರಿದನಂತೆ ಈತ. ನಂತರ ಅಲ್ಲಿ ಕೆಲವು ವರ್ಷ ದುಡಿದ ನಂತರ ಕೆಲಸ ಬೇಜಾರಾಯಿತು. ಕೆಲಸ ಬಿಟ್ಟ; ಮನೆಯಲ್ಲಿ ಪಾಠ ಹೇಳಿಕೊಡಲು ಆರಂಭಿಸಿದ. ಪ್ರೈವೇಟ್ ಟ್ಯೂಷನ್ನೂ ಚೆನ್ನಾಗಿಯೇ ನಡೀತು. ಗಂಡ ಹೆಂಡತಿ ಇಬ್ಬರೂ ಪಾಠ ಹೇಳಿಕೊಟ್ಟೇ ಸಾಕಷ್ಟು ಜನಪ್ರಿಯರೂ ಆದರು. ಸುಮಾರು ವಿದ್ಯಾರ್ಥಿಗಳು ಇವರ ಪಾಠ ಕೇಳೇನೆ ದೊಡ್ಡ ದೊಡ್ಡ ಪರೀಕ್ಷೆ ಪಾಸು ಮಾಡಿದರು, ಒಳ್ಳೇ ಉದ್ಯೋಗವನ್ನೂ ದೊರಕಿಸಿಕೊಂಡರು, ಸಮಾಜದಲ್ಲಿ ಪ್ರತಿಷ್ಠಿತರೂ ಆದರು....

ಕಳೆದ ವಾರ ಈತನಿಗೆ ಒಂದು ಪತ್ರ ಬಂದಿದೆ. ಈತನ ಸ್ಟೂಡೆಂಟ್ ಒಬ್ಬರು ಇಲ್ಲಿಯೇ ಸರ್ಕಾರೀ ಕಛೇರಿಯಲ್ಲಿ ದೊಡ್ಡ ಹುದ್ದೆಯಲ್ಲಿ ಇರುವವರು ಈತನ ವಿದ್ಯಾರ್ಥಿ ಆಗಿದ್ದರಂತೆ. ಹಳೇ ಮೇಷ್ಟರನ್ನ ನೆನೆಸಿಕೊಂಡು ಒಂದು ಪ್ರೀತಿ ತುಂಬಿದ ಪತ್ರ ಹಾಕಿದಾರೆ. ಇಂಥ ವರ್ಷದಲ್ಲಿ ತಮ್ಮ ವಿದ್ಯಾರ್ಥಿಯಾಗಿದ್ದೆ ನಾನು, ನನ್ನ ಮದುವೆಯಾಗಿ ಇಪ್ಪತ್ತೈದನೇ ವರ್ಷದ ಹಬ್ಬ ಮಾಡಿಕೊಳ್ತಾ ಇದೀನಿ. ತಾವು ದಯವಿಟ್ಟು ಬಂದು ನಮ್ಮನ್ನು ಹರಸಿ... ಅಂತ.

ಗೆಳೆಯ ತುಂಬಾ ಸಂತೋಷದಿಂದ ಈ ಸಂಗತಿ ಹೇಳುತ್ತಿರಬೇಕಾದರೆ ನನಗೂ ಸಂತೋಷವಾದರೂ ಒಳ ಒಳಗೆ ಅದೇನೋ ಹುಳಿ ಹುಳಿಯೂ ಆಯಿತು.

ಅಷ್ಟೆಲ್ಲವನ್ನೂ ನಮಗೆ ಕಲಿಸಿದ ಮೇಷ್ಟರಿಗೆ ನಾವು ಯಾವತ್ತಾದರೂ ಒಂದು ಸಾಲು ಪತ್ರ ಬರೆದೋ ಅಥವಾ ಎದುರಿಗೆ ಸಿಕ್ಕಾಗ ಒಂದು ನಮಸ್ಕಾರ ಹೇಳಿಯೋ ನಿಮ್ಮಿಂದ ನಾನು ಇವತ್ತು ಸಮಾಜದಲ್ಲಿ ಹೀಗಿದೇನೆ ಅಂತ ಒಂದೇ ಒಂದು ಮಾತು ತಿಳಿಸಿದೀವಾ ಅಂತ. ನಾವು ಮಾಡುವ ಒಂದೇ ಒಂದು ಚಿಕ್ಕ ಕೆಲಸ ಯಾರದಾದರೂ ಮನಸ್ಸಿಗೆ ಅತೀವ ಹರ್ಷ ಕೊಡಬಹುದು ಅಂತ ನಮಗೆ ತಿಳಿಸಿದರೂ ನಾವು ಯಾಕೆ ಆ ಕೆಲಸ ಮಾಡುಲ್ಲಾ? ಹೋಟಲಿನಲ್ಲಿ ತಿಂಡಿ ತಂದು ಇಡುವ ಮಾಣಿಗೆ ತಿಂಡಿ ಚೆನ್ನಾಗಿತ್ತು ಅಂತಲೋ ಥ್ಯಾಂಕ್ಸ್ ಅಂತಲೋ ಒಂದು ಮಾತು ಹೇಳಿ ಆತನಿಗೆ ಎಷ್ಟು ಸಂತೋಷವಾಗುತ್ತೆ ಗೊತ್ತಾ?

ಮನೆಯಲ್ಲಿ ನಿಮ್ಮ ಚಾಕರಿಯನ್ನು ದಿನದ ಇಪ್ಪತ್ತು ನಾಲ್ಕು ಘಂಟೆಯೂ ಮಾಡುವ ಹೆಂಡತೀಗೆ ಒಂದೇ ಒಂದು ಸಲ ಸೀರಿಯಸ್ಸಾಗಿ ''ಮನೆ ಅಂತ ಇದ್ದರೆ ಅದು ನಿನ್ನಿಂದಲೇ. ನೀನು ನನ್ನ ಮನೆ ಬೆಳಗಿದವಳು, ನನ್ನ ಮನೆ ಗೃಹಲಕ್ಷ್ಮಿ ನೀನು...'' ಅಂತ ಒಂದೇ ಒಂದು ಸಲ ಹೇಳಿ ನೋಡಿ... ಗಂಟಲು ಕಟ್ಟುತ್ತೆ ಅಲ್ಲವೇ ಹೀಗೆ ಹೇಳಬೇಕಾದರೆ? ಅದೇನೋ ಇನ್ ಹಿಬಿಷನ್ಸ್ ಇದೇ ಅಲ್ಲವೇ ನಮ್ಮಲ್ಲಿಯೇ? ಆದರೂ ಪ್ರಯತ್ನಿಸಿ - ಮದುವೆ ಊಟ ಮಾಡಿದಾಗ ಬಡಿಸಿದವರಿಗೆ ಚೆನ್ನಾಗಿ ಬಡಿಸಿದಿರಿ, ನಿಮ್ಮ ಅಡಿಗೆ ಚೆನ್ನಾಗಿತ್ತು-ಅನ್ನಿ: ಮನೇಲಿ ಹೆಂಡತಿ ಉಪ್ಪಿಟ್ಟು ಮಾಡಿದಾಗಲೂ ತುಂಬಾ ಚೆನ್ನಾಗಿದೆ ಅನ್ನಿ... ಒಂದೇ ಒಂದು ಸೌಜನ್ಯದ ಸಂತೋಷದ ಮಾತು ನಮ್ಮೆಲ್ಲರನ್ನು ಖುಷಿಯಾಗಿಡುತ್ತೆ ಅಂದರೆ ಆ ಒಂದು ಮಾತು ನಮ್ಮಲ್ಲಿಯೇ ಉಳಿದುಬಿಡಬೇಕೇ?



ಮದುವೆಯ ಮಮತೆಯ ಕರೆಯೋಲೆಗಳು

- ನೀರಗುಂದ ಕೇಶವಮೂರ್ತಿರಾವ್

ಬಾಗೂರು ಕ.ಸ.ಬೇ ಶ್ರೀ ರಂಗಪ್ಪನಿಂದ ರಾತ್ರಿ ಹತ್ತು ಗಂಟೇಲಿ ಫೋನ್ ಬಂದಾಗ 'ಎಲಾ ಇವ್ನ' ಎಂದೂ ಇಲ್ದೋನು ಇಷ್ಟೊತ್ನಲ್ಲಿ ಯಾಕ್ಮಾಡ್ದಂತ ರಿಸೀವರ್ ಎತ್ದೆ. ''ಹಲೋ ಕೇಶ್ವಣ್ಣ, ನಾನು ರಂಗಣ್ಣ. ಮುಂದಿನ ತಿಂಗಳು ನನ್ಮಗಳ ಮದುವೆ. ಲಗ್ನಪತ್ರಿಕೆ ಕಳಸ್ತಾ ಇದೀನಿ. ಬೆಂಗ್ಳೂರ್ನಲ್ಲೇ ನಡೆಯುತ್ತೆ. ನಿಮ್ಮಲ್ಲಿರೋ ನೀರ್ಗುಂದೋರ್ಗು, ಬಾಗೂರುನೋರ್ಗು ವಿಳಾಸ ಕಳಿಸು. ಎಲ್ರೂ ತಪ್ದೆ ಬರ್ಬೇಕು'' ಎಂದು ಹೇಳಿ ಫೋನ್ ಇಟ್ಟ.

ನಾನು ನಮ್ಮವರೆಲ್ಲರ ವಿಳಾಸ ಕಳಿಸಿದೆ. ರಂಗಣ್ಣನ ಮಗಳ ಮದುವೆ ಆಹ್ವಾನ ಪತ್ರಿಕೆ ತಲುಪುತ್ತೂಂತ ಇಲ್ಲಿರೋರೆಲ್ಲ ನನಗೆ ಫೋನ್ ಮಾಡಿ ಮದ್ವೆ ದಿವಸ ಭೇಟಿಯಾಗೋಣಂತ ತಿಳಿಸಿದ್ದರು. ಆದ್ರೆ ರಂಗಣ್ಣನ ಮದುವೆ ಆಹ್ವಾನ ಪತ್ರಿಕೆ (ಅಂಚೆಯವರ ನಿರ್ಲಕ್ಷ್ಯದಿಂದ ಮದುವೆ ಮುಗಿದ ನಂತರ ಬಂತು.) ಬರಲಿಲ್ಲ. ಮದುವೆಗೆ ತಪ್ಪದೇ ಸಕುಟುಂಬ ಪರಿವಾರ ಸಮೇತ ಹೋಗಿದ್ದೆವೆನ್ನಿ! ಮದುವೆಯ ಮಮತೆಯ ಕರೆಯೋಲೆ ಸರಿಯಾದ ಸಮಯಕ್ಕೆ ತಲುಪದಿದ್ದರೆ ಕರೆದಂತಹ ವ್ಯಕ್ತಿ ಇದೇ ಕಾರಣಕ್ಕೆ ಬರದಿದ್ದರೆ ಒಂದು ಕಾಲಕ್ಕೆ ದೊಡ್ಡ ಪ್ರಮಾದವಾಗಿ ಪರಿಣಮಿಸುತ್ತಿತ್ತು.

ಈ ಮದುವೆಯ ಮಮತೆಯ ಕರೆಯೋಲೆಗಳು ವಿವಿಧ ರೀತಿಯ ಅಂದ ಚೆಂದಗಳಿಂದ ಮುದ್ರಿತವಾಗಿರುತ್ತವೆ. ಮೊದಲಿಂದಲೂ ನನಗೆ ವಿಶೇಷವಾಗಿರುವ ಕರೆಯೋಲೆಗಳನ್ನು ಸಂಗ್ರಹಿಸುವ ಹವ್ಯಾಸ. ಮಹಾರಾಜರ ಮದುವೆಯ ಲಗ್ನಪತ್ರಿಕೆಯಿಂದ ಸಾಮಾನ್ಯರ ಲಗ್ನ ಪತ್ರಿಕೆಯ ಸುಮಾರು ಸಂಗ್ರಹವೇ ಇದೆ. ವಿಶೇಷವಾಗಿರುವ ಕೆಲವೊಂದು ಮದುವೆಯ ಮಮತೆಯ ಕರೆಯೋಲೆಗಳ ಪರಿಚಯ ಇಂತಿವೆ.

ಈ ಕರೆಯೋಲೆಗಳನ್ನು ಅಭ್ಯಾಸ ಮಾಡುವುದೇ ಒಂದು ಕಲೆ. ''ಮಾನವನ ಜೀವನದಲ್ಲಿ ಅತಿ ಮುಖ್ಯ ಘಟನೆ - ಮದುವೆ'' ಇದು ನನ್ನ ಮಾತಲ್ಲ. ಆಹ್ವಾನ ಪತ್ರಿಕೆಯೊಂದರ ತಲೆ ಬರಹ! ಒಕ್ಕಣೆ ಹೀಗಿದೆ -

ದಿನಾಂಕ 20-4-1983 ರಲ್ಲಿ ನಡೆದ ಮದುವೆಯ ಕರೆಯೋಲೆ - ''ಬರಬೇಕು - ಬರಬೇಕು - ಏನು ಹಾಗಂದ್ರೆ ಬರ್ಲೇಬೇಕು. ಕಾರಿದ್ದರೆ ಕಾರಿನಲ್ಲೋ, (ಬಲು ತರಲೆ ಸರ್ವೀಸು) ಬಿ.ಟಿ.ಎಸ್. ಬಸ್ಸಿನಲ್ಲೋ, ಇಲ್ಲದಿದ್ದರೆ ಆಟ ಆಡ್ಲೋ ರಿಕ್ಷಾದಲ್ಲೋ, ಪತ್ತಿರವಿದ್ದರೆ ನಟರಾಜ ಸರ್ವೀಸ್‌ನಲ್ಲೋ, ಹೇಗೋ ಹಾಜರಾಗಬೇಕು'' ಅಂತ ಆಹ್ವಾನಿಸಿರುತ್ತಾರೆ!

ಇದರಿಂದಲೇ ಗೊತ್ತಾಗುತ್ತದೆ ಮದುವೆಗಳು ಎಷ್ಟು ಜನಪ್ರಿಯ ಎನ್ನುವುದು. ಮದುವೆಯನ್ನು ಕುರಿತು ಮದುವೆಯಾದವರ ಅನುಭವಗಳೆಲ್ಲವೂ ಅತ್ಯಮೂಲ್ಯ! ಮದುವೆಯನ್ನು ಕುರಿತ ಚಿಂತನೆಗಳನ್ನು ಹೇಳಹೊರಟರೆ ಅದೇ ಬೃಹತ್ ಕೃತಿಯಾದೀತು.

ಆದರೂ ಒಂದೆರಡನ್ನು ಆಸ್ವಾದಿಸೋಣ! ಜಾರ್ಜ್ ಬರ್ನಾಡ್‌ಷಾ "Marriage is popular because it combines the maximum of temptition with the maximum of opportunity" (ಮಹತ್ತರ ಅವಕಾಶದೊಂದಿಗೆ ಮಹತ್ತಮ ಪ್ರೇರಣೆಯನ್ನು ಒಂದುಗೂಡಿಸುವುದರಿಂದಲೇ ಮದುವೆ ಜನಪ್ರಿಯ) ಎನ್ನುತ್ತಾನೆ.

ಮದುವೆಯ ಮಮತೆಯ ಕರೆಯೋಲೆಗಳು ಸರಳ ಸುಂದರ ಆಕರ್ಷಕಗಳಿಂದ ಕೂಡಿರುತ್ತದೆಯಾದರೂ 'ಮದುವೆಯಾದವರ ಅನುಭವವೆಲ್ಲವೂ ಆಗಬಾರದಿತ್ತೇನೊ' ಎನ್ನಿಸುವುದು ಸಹಜ! ಮದುವೆಯನ್ನು ಕುರಿತಾದ ಹೇಳಿಕೆಗಳು ಅಷ್ಟು ಸ್ವಾರಸ್ಯಕರ! ಬೀchi ಯವರು ತಮ್ಮ 'ಉತ್ತರ ಭೂಪ' ಗ್ರಂಥದಲ್ಲಿ ಓದುಗರು ಕೇಳಿರುವ ಮದುವೆಯ ಕುರಿತ ಪ್ರಶ್ನೆಗಳಿಗೆ ಇಪ್ಪತ್ತೆಂಟು ಪುಟಗಳಲ್ಲಿ ಉತ್ತರಿಸಿರುತ್ತಾರೆ! ಮದುವೆ ಆಗಿರುವವರು / ಆದವರೂ ಸಹ ತಪ್ಪದೇ ಓದಬೇಕು! ಒಂದೆರಡು ಸ್ಯಾಂಪಲ್.

ಪ್ರಶ್ನೆ: ನನಗೆ ಮದುವೆ ಆಗಲು ಮನಸ್ಸಿದೆ. ಆದರೆ ಇನ್ನೂ ವಯಸ್ಸಿಲ್ಲ ಅನ್ನುತ್ತಾರೆ. ಮದುವೆ ಯಾವಾಗ ಆಗಬೇಕು ಸಾರ್?

ಉತ್ತರ: 'ಥೂ! ಮದುವೆ ಮಾತ್ರ ಬೇಡ ಮಾರಾಯ' ಎಂದೆನಿಸುವ ಕೊಂಚ ಮುಂಚೆ ಆದರೆ ಸಾಕು. ಹೀಗೆನಿಸುವುದು ಮದುವೆ ಆದ ನಂತರವೇ.

★★★

ಪ್ರಶ್ನೆ: ಮಾನವನಿಗೆ ಸುಖ ಸಿಗುವುದು ಮದುವೆಯ ಮುಂಚೆಯೋ ಅಥವಾ ಮದುವೆಯಾದ ಮೇಲೆಯೋ ತಿಳಿಸುತ್ತೀರಾ ಗುರುಗಳೆ?

ಉತ್ತರ: ಮದುವೆ ಆದ ನಂತರ ಸುಖ ಸಿಗುತ್ತದೆ ಎಂದು ಮದುವೆ ಆಗುವವರೆಗೂ ತಿಳಿದಿರುತ್ತಾರೆ. ಆದ ನಂತರ ಆಗುವ ಮುಂಚೆಯೇ ಸುಖ ಇತ್ತು ಅಂದುಕೊಳ್ಳುತ್ತಾರೆ.

★★★

ಪ್ರಶ್ನೆ: ಪೇಟೆ ಹುಡುಗಿಯನ್ನು ಮದುವೆಯಾಗುವುದು ಒಳ್ಳೆಯದೋ, ಹಳ್ಳಿ ಹುಡುಗಿಯನ್ನು ಮದುವೆಯಾಗುವುದು ಒಳ್ಳೆಯದೋ, ವಿದ್ಯಾವಂತಳನ್ನು ಮದುವೆ ಆಗುವುದು ಒಳ್ಳೆಯದೋ ಅಥವಾ ಅವಿದ್ಯಾವಂತ ಹುಡುಗಿಯನ್ನು ಮದುವೆ ಆಗುವುದು ಒಳ್ಳೆಯದೋ?

ಉತ್ತರ: ಮದುವೆ ಆಗುವುದು ಒಳ್ಳೆಯದು ಎಂದು ನಿಮಗಾರು ಹೇಳಿದರು?

★★★

ಮದುವೆಯ ಕುರಿತು ಪಾಶ್ಚಾತ್ಯ ಚಿಂತನ ಶೀಲರ ಹೇಳಿಕೆಗಳು ಸ್ವಾರಸ್ಯವಾಗಿಯೇ ಇರುತ್ತವೆ. ಒಂದೆರಡನ್ನು ಮಾತ್ರ ಗಮನಿಸಿ -

''ಪಂಜರಗಳ ಹಾಗೆಯೇ ಮದುವೆಯಲ್ಲೂ ಹೊರಗಿರುವ ಹಕ್ಕಿಗಳು ಒಳ ಹೋಗಲು ಹೆಣಗುತ್ತವೆ. ಒಳಗಿರುವುವು ಹೊರ ಬೀಳಲು ಹೆಣಗುತ್ತವೆ. (ಮೈಕೆಲ್ ಎಕ್ವಿಂಡಿ ಮಾಂಟೇನ್) (Marriage is like a cage; one sees the birds

out side disperate to get in, and those inside equally desperate to get out.)

★★★

''ಮದುವೆ ಇನ್ನೇನು ಆಗಲಿರುವವನಿಗೆ ಆಗಿರುವವನು ನೀಡುವ ಉಪದೇಶ ಬೇಡ'' (ಪಂಚ್ Vol. 8 page-1) (Advice to persons about to marry - "Don't.)

★★★

''ನನ್ನ ಅಭಿಪ್ರಾಯದಲ್ಲಿ ಪ್ರತಿಯೊಬ್ಬ ಹೆಂಗಸೂ ಮದುವೆಯಾಗಬೇಕು, ಯಾವ ಗಂಡಸೂ ಅಲ್ಲ'' (ಬೆಂಜಮಿನ್ ಡಿಸ್ರೇಲಿ) (Every woman should marry and no man)

★★★

ಸಾಮಾನ್ಯರ ದೃಷ್ಟಿಯಲ್ಲಿಯೂ ಮದುವೆಯ ಅನಿಸಿಕೆ ಕಡಮೆಯದೇನೂ ಅಲ್ಲ. 29-1-1981 ರಲ್ಲಿ ಮದುವೆಯಾದವರೊಬ್ಬರು ತಮ್ಮ ಮಮತೆಯ ಕರೆಯೋಲೆಯಲ್ಲಿ ''ಬಲ್ಲವರು ಅನ್ನುತ್ತಾರೆ...'' ಎಂಬ ಶೀರ್ಷಿಕೆಯಡಿಯಲ್ಲಿ ಮದುವೆಯ ಕುರಿತ ಹೇಳಿಕೆಗಳನ್ನು ಮುದ್ರಿಸಿ ತಮ್ಮ ಮದುವೆಗೆ ಆಹ್ವಾನಿಸಿರುತ್ತಾರೆ.

ಇಂದಿನ ಮದುವೆಯ ಕರೆಯೋಲೆಗಳು ಆಕಾರ, ಅಳತೆಗಳಲ್ಲೂ ನಾಜೂಕಾಗಿರುತ್ತವೆ. 22-11-96 ರಲ್ಲಿ ನಡೆದ ಮದುವೆಯ ಕರೆಯೋಲೆ 18cm x 28 cm ಅಳತೆ ಮುಖಪುಟದಲ್ಲಿ ವಧೂ-ವರರಿಬ್ಬರೂ ತಿರುಪತಿಯ ತಿಮ್ಮಪ್ಪನಿಗೆ ಪುಷ್ಪವನ್ನು ಅರ್ಪಿಸಲು ನಿಂತಿದ್ದಾರೆ! ಈ ಅದ್ದೂರಿಯ ಮದುವೆಯ ಕರೆಯೋಲೆಯ ಮುದ್ರಣದ ಬೆಲೆ? ಗೊತ್ತಾಗುವುದಿಲ್ಲ!

ವಿಸಿಟಿಂಗ್ ಕಾರ್ಡ್ ಅಳತೆಯ ಕರೆಯೋಲೆಗಳು ಇತ್ತೀಚೆಗೆ ಚಾಲ್ತಿಯಲ್ಲಿವೆ. ಒಂದು ಕಾಲಕ್ಕೆ ಪರಸ್ಥಳದಲ್ಲಿ ಮದುವೆ ನಡೆದಾಗ ಬಂಧು-ಮಿತ್ರರು ಹಾಜರಾಗುವುದು ಕಡಮೆ. ಅಂಥ ಸಂದರ್ಭದಲ್ಲಿ ಕರೆಯೋಲೆಯ ಜೊತೆಯಲ್ಲಿ ಆನಂತರ ಸ್ವಸ್ಥಳದಲ್ಲಿ ನಡೆಯುವ ಭೋಜನ ಕೂಟಕ್ಕೆ ಈ ತೆರನ ಕಾರ್ಡನ್ನು ಕೊಡುವ ಪದ್ಧತಿ ಇತ್ತು ಈಗಲೂ ಸಹ ಇದೆ.

ಇಂದಿನ ಕಂಪ್ಯೂಟರ್ ಯುಗದಲ್ಲಿ ಮದುವೆಯ ಮಮತೆಯ ಕರೆಯೋಲೆಗಳನ್ನು ಬಂಧು ಮಿತ್ರರಿಗೆ ಕೊಟ್ಟು ಆಹ್ವಾನಿಸುವ ಕೆಲಸ ತುಂಬಾ ಕಷ್ಟ. ''ಮದುವೆ ಮಾಡಬಹುದು. ಮದುವೆಗೆ ಕರೆಯುವುದು ತುಂಬಾ ಕಷ್ಟ'' ವಿಜಯನಗರದಿಂದ ಜಯನಗರದವರೆಗೆ ಬೆಳಗ್ಗೆ ಕರೆಯಲು ಹೊರಟರೆ ಮನೆ ಸೇರಲು ರಾತ್ರಿ ಆಗಿರುತ್ತದೆ. ಆದರೂ ಕರೆಯುವ ಕೆಲಸ ಮುಗಿದಿರುವುದಿಲ್ಲ, ಮದುವೆಯ ಕರೆಯೋಲೆಗಳನ್ನು ಬಂಧು ಮಿತ್ರರಿಗೆ ಖುದ್ದಾಗಿ ಕೊಟ್ಟು ನಗುಮುಖದಿಂದ ಸ್ವಾಗತಿಸುವ ಅವಕಾಶಗಳು ಈಗೀಗ ಕಡಿಮೆ ಆಗುತ್ತಿವೆ. ದೂರವಾಣಿ/ಅಂಚೆ/ಕೊರಿಯರ್ ಮುಖಾಂತರ ಆಹ್ವಾನಿಸ ಬೇಕಾಗುತ್ತದೆ. ಹೀಗೆ ಮಾಡಿದಾಗ ಆಕ್ಷೇಪಣೆಗಳ ಸುರಿಮಳೆಯನ್ನೇ ಎದುರಿಸ ಬೇಕಾಗುತ್ತದೆ. ಯಾವುದೋ ಕಾರಣಕ್ಕಾಗಿ ಅಂದವಾದ ಮುದ್ರಿಸಿದ ಆಹ್ವಾನ ಪತ್ರಿಕೆ

ಮುಖ್ಯವಾದ 'ಆಸಾಮಿ'ಗೆ ತಲುಪಿರುವುದಿಲ್ಲ. ''ಲಕ್ಷಾಂತರ ರೂಪಾಯಿ ಖರ್ಚು ಮಾಡ್ದ. ಯೋಗ್ತಿಗೆ ಒಂದು ಇನ್ವಿಟೇಶನ್ ಇಲ್ಲ'' ಎಂಬ (ಅ) ಹಿತವಚನಗಳನ್ನು ಮದುವೆ ಮಾಡಿದ ಗಂಡು-ಹೆಣ್ಣಿನ ತಂದೆ ತಾಯ್ಗಳು ತಪ್ಪದೇ ಕೇಳಿಯೇ ಇರುತ್ತಾರೆ.

ಮದುವೆಯ ಕರೆಯೋಲೆಗಳಲ್ಲಿ ಕಾರ್ಯಕ್ರಮಗಳ ವಿವರವೂ ಇರುತ್ತದೆ. ಮದುವಣಿಗ ಶಾಸ್ತ್ರ, ವರಪೂಜೆ, ಮಾರನೆ ದಿವಸ ಧಾರೆ-ಸಂಜೆ ಆರತಕ್ಷತೆ ಇತ್ಯಾದಿ... ಎರಡು ದಿವಸದ ಕಾರ್ಯಕ್ರಮಗಳು ಅವರವರ ಅನುಕೂಲಕ್ಕೆ ತಕ್ಕಂತೆ ಆಗಮಿಸುತ್ತಾರೆ.

ಕರೆಯೋಲೆಗಳನ್ನು ನೋಡಿದರೆ ಸಾಕು. ಸರಳವೋ, ಅದ್ಧೂರಿಯೋ ಎಂದು ಊಹಿಸಬಹುದು. ಒಂದು ದಿವಸ? ಗಂಟೆ? ಬೆಳಗ್ಗೆ... ಎಲ್ಲವೂ ಬೇಗನೆ ಮುಗಿದು ಹೋಗುವ ಸಂದರ್ಭವೂ ಉಂಟು. ಕರೆಯೋಲೆಗಳು ಎಷ್ಟು ಸರಳವಾಗಿರುತ್ತವೆ ನೋಡಿ.

ದಿನಾಂಕ 31-8-81 ರಂದು ನಾವು ಮದುವೆಯಾಗಲಿದ್ದೇವೆ
ನೀವು ಬನ್ನಿ ನಮ್ಮನ್ನು ಹರಸಿ

ಮುಹೂರ್ತ: 11-07	ವಧು
ಸ್ಥಳ:	ವರ

.... ಜೊತೆ ನನ್ನ ವಿವಾಹ, ಸ್ಥಳ............
ದಿನಾಂಕ: ಮೇ 20, 1976, ಮುಹೂರ್ತ: 11-30 ರಿಂದ 12-45
ನೀವು ದಯಮಾಡಿ ಬನ್ನಿ ಶುಭ ಹಾರೈಕೆ ತನ್ನಿ

ಮಾಮೂಲಾಗಿ ಮುದ್ರಿತವಾಗಿರುವ ಕರೆಯೋಲೆಗಳ ಕುರಿತು ಹೇಳುವ ಅಗತ್ಯವಿಲ್ಲ. ಶ್ರೀ ಇಂದ... ಪ್ರಾರಂಭವಾಗಿ.... ಶಾಲಿವಾಹನಶಕ.... ನಮ್ಮ ಕುಮಾರ... ರವರ ಪುತ್ರಿ.... ಸಕುಟುಂಬ... ಆಶೀರ್ವದಿಸಿ ತಮ್ಮವರಾದ....

ಸಾಮಾನ್ಯರ ಮದುವೆಯ ಕರೆಯೋಲೆಗಳೇ ಹೀಗಿರಬೇಕಾದರೆ ಮಹಾರಾಜರ ಮನೆಯ ಮದುವೆಯ ಕರೆಯೋಲೆಗಳ ಸಂಭ್ರಮ ಗತ್ತು-ಗಮ್ಮತ್ತು ಹೇಗಿರಬೇಡ!

ನನ್ನ ಮುತ್ತಜ್ಜನಿಗೆ 1900 ರಲ್ಲಿ ಮೈಸೂರು ಮಹಾರಾಜರಾಗಿದ್ದ ಶ್ರೀ ಕೃಷ್ಣರಾಜೇಂದ್ರ ಒಡೆಯರ್‌ರವರ ವಿವಾಹ ಮಹೋತ್ಸವದ ಲಗ್ನಪತ್ರಿಕೆ ಅರಮನೆಯಿಂದ ಬಂದಿರುತ್ತದೆ. (ಸನ್ 1900ನೆ ಯಿಸವಿ ಜೂನ್ ತಾರೀಖು 6) ಇದರೊಂದಿಗೆ ಮದುವೆಯ 11 ದಿವಸಗಳ ಕಲಾಪಗಳ ವಿವಾಹ ಮಹೋತ್ಸವ ಪ್ರದರ್ಶನ ಪತ್ರಿಕೆಯೂ ಇದೆ. ದೀರ್ಘವಾಗಿರುವುದರಿಂದ ಪೂರ್ಣ ವಿವರ ಇಲ್ಲಿ ಕೊಡಲಾಗುವುದಿಲ್ಲ. ಮದುವೆಯ ಮಮತೆಯ ಕರೆಯೋಲೆಗಳು ಮಹಾರಾಜರಿಂದ ಸಾಮಾನ್ಯ ಜನರ ಮದುವೆಯವರೆಗೂ ತಮ್ಮ ಜನಪ್ರಿಯತೆಯನ್ನು ಇಂದಿನವರೆಗೂ ಮುಂದು ಸಹ ಉಳಿಸಿಕೊಂಡಿರುತ್ತದೆ.

ಶುಭಮಸ್ತು.

ಮೈಸೂರು ಸಂಸ್ಥಾನದ ಮಹಾರಾಣೀ-ರೀಜೆಂಟರವರಾದ
ವಾಣೀವಿಲಾಸ ಸನ್ನಿಧಾನದಿಂದ.

ವಿವಾಹಮಹೋತ್ಸವ ಲಗ್ನಪತ್ರಿಕೆ.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನಶಕ ವರ್ಷಂಗಳು ೧೮೨೨ ನೆಯ ಶಾರ್ವರಿನಾಮಸಂವತ್ಸರದ ಜ್ಯೇಷ್ಠ ಶುದ್ಧ ೯ ಬುಧವಾರ ಉತ್ತರಾನಕ್ಷತ್ರ (ಸನ್ ೧೯೦೦ನೆ ಯಿಸವಿ ಜೂನ್ ತಾರೀಖು ೬) ಈ ಶುಭದಿವಸದಲ್ಲಿ ಸೂರ್ಯೋದಯವಾದ ೧೦ ಘಳಿಗೆಯ ಮೇಲೆ ೧೭ ಘಳಿಗೆಯೊಳಗೆ ಸಿಂಹಲಗ್ನದಲ್ಲಿ ನಮ್ಮ ಕುಮಾರರು ಚಿರಂಜೀವಿ ಸಹಸ್ರಾಯುಷ್ಯರಾದ ಶ್ರೀಮನ್ಮಹಾರಾಜರು ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹಾದುರವರಿಗೆ ಶ್ರೀ ರಾಣಾ ಝಾಲಾ ಬನೆಸಿಂಹರವರ ಪುತ್ರಿಯರು ಸರ್ವಾಲಂಕಾರ ಶೋಭಿತರಾದ ಸೌಭಾಗ್ಯವತೀ ಪ್ರತಾಪಕುಮಾರಿಯವರನ್ನು ವಿವಾಹ ಬೆಳೆಯಿಸುವದಾಗಿ ನಿಶ್ಚಯಿಸಿರುವದರಿಂದ ಈ ಮಹೋತ್ಸವಕ್ಕೆ ತಾವುಗಳು ಬಂದು ಸಂತೋಷಪಡಿಸತಕ್ಕದ್ದು.

[illegible]

[illegible]

ಶ್ರೀಮನ್ಮಹಾರಾಜರು ಶ್ರೀ ಕೃಷ್ಣರಾಜೇಂದರ ಒಡೆಯರ್ ಬಹಾದುರವರ ವಿವಾಹ ಮಹೋತ್ಸವ ಕ್ರಮ

ಪ್ರದರ್ಶನ ಪತ್ರಿಕೆ

ಸನ್ 1900 ನೆಯ ಜೂನ್ (ಶಾರ್ವರಿನಾಮಸಂವತ್ಸರದ ಜ್ಯೇಷ್ಠ ಶುದ್ಧ.) 2ನೆಯ ಸ್ಥಿರವಾರ (5) ಈ ಶುಭದಿವಸ ಪ್ರಾತಃಕಾಲದಲ್ಲಿ ಎಣ್ಣೆಶಾಸ್ತ್ರ ಮಂಗಳಸ್ನಾನ ಬೆಳೆದ ನಂತರ ಹಗಲು 10 ಘಂಟೆಯ ಮೇಲೆ 11 ಘಂಟೆಯೊಳಗೆ ಶುಕ್ರಕಾಲ ಹೋರೆಯಲ್ಲಿ ದೇವರುಗಳಿಗೆ ಮೀಸಲುಕಟ್ಟಿ ಸುವಾಸಿನೀ ಪೂಜೆ ದಂಪತಿಪೂಜೆಗಳು ಬೆಳೆಯುತ್ತವೆ.

4ನೆಯ ಸೋಮವಾರ (7) ಈ ಶುಭದಿವಸ ಹಗಲು 3 ಘಂಟೆಯ ಮೇಲೆ ಗುರುಕಾಲ ಹೋರೆಯಲ್ಲಿ ಶಕುನಮನೋಜಯ, ಕಡಗ ಬಳೆ ಆಳತೆ, ಸ್ತಂಭಮುಹೂರ್ತ, ಈ ಮೂರು ಶಾಸ್ತ್ರಗಳಿಗೂ ನಾಲ್ಕು ಬೀದಿಗಳಲ್ಲಿ ಜಿಲೊ ವಗೈರೆ ಮರ್ಯಾದೆಗಳೊಡನೆ ಮೆರವಣಿಗೆ ಆಗುತ್ತೆ. ಶಕುನಮನೋಜಯಕ್ಕೆ ಜಗನ್ಮೋಹನ ಬಂಗಲೆಯಲ್ಲಿ ಆರತ್ಯಕ್ಷತೆ ಬೆಳೆಯುತ್ತೆ. ಅನಂತರ ಬಳೆಮಲಾರ ಪೂಜೆ; ಗೋಧಿಕಲ್ಲು ಶಾಸ್ತ್ರ ಒಂದಕ್ಕೀ ಒಂದು ಭತ್ತದ ಶಾಸ್ತ್ರಗಳು ಆದ ನಂತರ ಮದವಣಿಗ ಶಾಸ್ತ್ರದ ಕಟ್ಟಳೆಯೂ ಆರತ್ಯಕ್ಷತೆಯೂ ಬೆಳೆಯುತ್ತವೆ.

ಈ ರಾತ್ರಿ 7 ಘಂಟೆಯ ಮೇಲೆ 9 ಘಂಟೆಯೊಳಗೆ ಬುಧ ಚಂದ್ರ ಕಾಲ ಹೋರೆಗಳಲ್ಲಿ ಹರಿಸೇವೆ ನಡೆಯುತ್ತೆ. ಅನಂತರ ತೇರಣ ಒಪ್ಪಿಸಿಕೊಳ್ಳುವುದು.

5ನೆಯ ಮಂಗಳವಾರ (8) ಈ ಶುಭದಿವಸ ಹಗಲು 8 ಘಂಟೆಯ ಮೇಲೆ ಶುಕ್ರಕಾಲ ಹೋರೆಯಲ್ಲಿ ಎಣ್ಣೆಶಾಸ್ತ್ರ ಮಂಗಳ ಸ್ನಾನವಾದ ನಂತರ ಶ್ರೀ ಪರಕಾಲಸ್ವಾಮಿಗಳವರ ಪಾದಪೂಜೆ ದೀಕ್ಷಾವಸ್ತ್ರಧಾರಣೆ ಕಂಕಣಧಾರಣೆಗಳು ಆದಮೇಲೆ ಅಷ್ಟಮಂಗಳ ದ್ರವ್ಯ ಸಮೇತ ವಿವಾಹ ಮಂಟಪಕ್ಕೆ ಚಿತ್ತೈಸಿ ಸಂಭಾವನೆ, ಸಭಾನುಜ್ಞೆ, ಪುಣ್ಯಾಹ, ಮಹಾಮಾತೃಶ್ರೀಯವರ ಪಾದಪೂಜೆ, ನಾಂದಿ, ಗ್ರಹಯಜ್ಞ, ಮಾತೃಕಾಪೂಜೆ ಮೊದಲಾದವು ಬೆಳೆಯುತ್ತವೆ. ಈ ಕಾಲದಲ್ಲಿ ಹೆಣ್ಣಿನ ಮನೆಯಲ್ಲಿಯೂ ಮೇಲೆ ಕಂಡ ಮೇರೆ ಎಣ್ಣೆಶಾಸ್ತ್ರ ಮೊದಲಾದವು ಬೆಳೆಯುತ್ತವೆ.

ಈ ದಿವಸ ಸಾಯಂಕಾಲ 8 ಘಂಟೆಯ ಮೇಲೆ 6 ಘಂಟೆಯೊಳಗೆ ಬುಧ ಚಂದ್ರ ಕಾಲ ಹೋರೆಗಳಲ್ಲಿ ಕಾಶೀಯಾತ್ರೆ ಬೆಳೆಯುತ್ತೆ. ಕಾಶೀಯಾತ್ರೆಗೆ ಕರಿಯ ಕಲ್ಲುತೊಟ್ಟಿಯಿಂದ ಜಿಲೊ ಮೊದಲಾದ ಸಕಲ ಮರ್ಯಾದೆಗಳೊಡನೆ ಮೆರವಣಿಗೆ ಬೆಳೆಯುತ್ತೆ. ಕೃಷ್ಣ ದೇವರ ಗುಡಿಯ ಬಳಿ ಫಲವೊಪ್ಪಿಸುತ್ತೆ.

ಈ ರಾತ್ರಿ 7 ಘಂಟೆಯ ಮೇಲೆ ಗುರುಕಾಲ ಹೋರೆಯಲ್ಲಿ ಉದಕಶಾಂತಿಯಾದ 10 ಘಂಟೆಯ ಮೇಲೆ ಶುಕ್ರ ಕಾಲ ಹೋರೆಯಲ್ಲಿ ಕೆರೆಯಿಂದ ಜಿಲೊ ಮೊದಲಾದ ಸಮಸ್ತ ಮರ್ಯಾದೆಗಳೊಡನೆ ದೇವರು ತರಲ್ಪಡುತ್ತೆ.

6ನೆಯ ಭುಧವಾರ (9) ಈ ಶುಭದಿವಸ ಹಗಲು 9 ಘಂಟೆಯ ಮೇಲೆ ಮೆರವಣಿಗರನ್ನು ಮೆರವಣಿಗೆಯಿಂದ ಧಾರೆಗೆ ಕರತರುವುದು. ಅನಂತರ 10 ಗಟೆಯು 57 ಮಿನಿಟನ ಮೇಲೆ 11 ಘಂಟೆಯು 25 ಮಿನಿಟನೊಳಗೆ ಸಿಂಹಲಗ್ನ ವೃಷಭ ಮಿಥುನಾಂಶಗಳಲ್ಲಿ ಧಾರಾಮುಹೂರ್ತ

ಬೆಳೆಯುತ್ತೆ. ಎಂದರೆ ಈ ಕಾಲದಲ್ಲಿ ಮಧುಪರ್ಕ, ಕನ್ಯಾ ಸಮೀಕ್ಷಣೆ, ಮಹಾಸಂಕಲ್ಪ, ಕನ್ಯಾದಾನ, ಕಂಕಣಧಾರಣೆ, ಮಾಂಗಲ್ಯಧಾರಣೆ, ಅಗ್ನಿಮುಖ, ಪ್ರಧಾನ ಹೋಮ, ಅಶ್ಮಾರೋಪಣ, ಸಪ್ತಪದಿಯೆ ಮೊದಲಾದವು ಬೆಳೆಯುತ್ತವೆ. ಈ ಮಧ್ಯೆ ಗೌರ್ನರವರು ಮದು ರೆಸಿಡೆಂಟರು ದಯಮಾಡಿಸಿ ವೈಸರಾಯವರ ಖಿಲ್ಲತ್ತು ಖರೀತಾಗಳನ್ನು ಒಪ್ಪಿಸುತ್ತಾರೆ. ಅನಂತರ ಇತರ ದೇಶದ ಮಹಾರಾಜರು ವಗೈರೆಯವರ ಖಿಲ್ಲತ್ತುಗಳು ಕ್ರಮಪ್ರಕಾರವಾಗಿ ಒಪ್ಪಿಸಲ್ಪಡುವವು.

ಈ ರಾತ್ರಿ, ಔಪಾಸನ ಪ್ರಾರಂಭಾನಂತರ ಪ್ರವೇಶ ಹೋಮ ಅರುಂಧತೀ ದರ್ಶನವಾದ ಮೇಲೆ ಆರತ್ಯಕ್ಷತೆ ಬೆಳೆಯುತ್ತೆ.

7ನೆಯ ಗುರುವಾರ (10)
8ನೆಯ ಶುಕ್ರವಾರ (11)
9ನೆಯ ಸ್ಥಿರವಾರ (11)
} ಈ ಶುಭ ದಿವಸಗಳಲ್ಲಿ ಪ್ರಾತಃಕಾಲದಲ್ಲಿ ದಂಪತಿಗಳು ಚಿತ್ತೈಸಿ ಔಪಾಸನೆ, ಆರತ್ಯಕ್ಷತೆಗಳು ಬೆಳೆಯುತ್ತವೆ. ರಾತ್ರಿ ಔಪಾಸನ ಪ್ರಾರಂಭಾನಂತರ ಉರಟಣೆ ಆರತ್ಯಕ್ಷತೆಗಳು ಬೆಳೆಯುತ್ತವೆ.

10ನೆಯ ಭಾನುವಾರ (12) ಈ ಶುಭದಿವಸ ಹಗಲು 8 ಘಂಟೆಯ ಮೇಲೆ ಬುಧ ಚಂದ್ರ ಕಾಲ ಹೋರೆಗಳಲ್ಲಿ ನಾಕಬಲಿ ಮಹೋತ್ಸವ, ಬೊಂಬೆಯ ಶಾಸ್ತ್ರ ಪುಣ್ಯಾಹ, ವಸಂತಮಾಧವ ಪೂಜೆ, ಆರತ್ಯಕ್ಷತೆ ಮೊದಲಾದವು ಬೆಳೆಯುತ್ತವೆ.

ಆರೋಗಣೆ ಬೆಳೆಸಿಕೊಂಡು 3 ಘಂಟೆಯ ಮೇಲೆ 5 ಘಂಟೆಯೊಳಗೆ ಬುಧ ಚಂದ್ರ ಕಾಲ ಹೋರೆಗಳಲ್ಲಿ ದಂಪತಿಗಳು ಚಿತ್ತೈಸಿ ಸ್ತಂಭಪೂಜೆ, ಮಂಟಪಪೂಜೆ ಮಾಡಿಕೊಂಡು ದೇವರ ಮನೆಗೆ ಚಿತ್ತೈಸಿ ಕಂಕಣ ವಿಸರ್ಜನೆಯಾದ ಮೇಲೆ ದೇವರನ್ನು ಕೆರೆಗೆ ಬಿಜಮಾಡಿಸುತ್ತೆ.

12ನೆಯ ಮಂಗಳವಾರ (14) ಈ ದಿವಸ ಸಾಯಂಕಾಲದಲ್ಲಿ ಯೂರೋಪಿಯನ್‌ರವರು 5 ಘಂಟೆಯಿಂದ 7 ಘಂಟೆವರೆಗೆ ಆರತ್ಯಕ್ಷತೆ ನೋಡುವ ಬಗ್ಗೆ ಜಗನ್ಮೋಹನ ಬಂಗಲೆಗೆ ಬರುತ್ತಾರೆ.

ಈ ರಾತ್ರಿ 9 ಘಂಟೆಗೆ ಗೌರ್ನಮೆಂಟ್ ಹೌಸಿನಲ್ಲಿ ಡಿನ್ನರ್ ನಡೆಯುತ್ತೆ. ಅನಂತರ ಆತಷ್ ಬಾಜ್ ತಮಾಷೆ ಪ್ರದರ್ಶಿಸಲ್ಪಡುತ್ತೆ.

13ನೆಯ ಬುಧವಾರ (15) ರಾತ್ರಿ 8 ಘಂಟೆಗೆ ಪಟ್ಟಣದಲ್ಲಿ ಮೆರವಣಿಗೆ ನಡೆಯುತ್ತೆ.

14ನೆಯ ಗುರುವಾರ (ಬ1) ಈ ರಾತ್ರಿ . ಪಟ್ಟಣದಲ್ಲಿ ದೀಪೋತ್ಸವವನ್ನು ಪರಾಮರಿಸುವದಕ್ಕಾಗಿ ಸವಾರಿಗಳು ಚಿತ್ತೈಸುತ್ತವೆ.

☞ ಡ್ರೆಸ್ಸಿನ ವಿವರ

1. 4ನೆಯ ತಾರೀಖಿನ ದಿವಸದಿಂದ ಮಹೋತ್ಸವಗಳು ಬೆಳೆಯುವವರೆಗೂ ದರ್ಬಾರ್ ಡ್ರೆಸ್.
2. ದರ್ಬಾರ್ ಡ್ರೆಸ್ ಇಲ್ಲದವರು -
   (1) ಕರಿಯ ಬನಾತಿನ ಲಾಂಗ್ ಕೋಟ್ ಅಥವಾ ಬಿಳಿಯ ರೇಷ್ಮೆ ಅಥವಾ ಬಿಳಿಯ ಸುಂದರ ಖಾನೆಯ ಲಾಂಗ್ ಕೋಟ್.
   (2) ಷರಾಯಿ - ಬಿಳಿಯದು.
   (3) ರುಮಾಲು ಮತ್ತು ಕಣ್ಣುರಬಂದು ಕಲಾಬತ್ ಅಂಚಿನದಾಗಿರಬೇಕು.

ಶಕುನ(ನಿ)ಗಳು

- ಬೇಲೂರು ರಾಮಮೂರ್ತಿ

''ರೀ... ಹತ್ತು ಐವತ್ತಕ್ಕೆ ಹೊರಡೋಣ್ವೋ... ಅಥವಾ ಹನ್ನೊಂದಕ್ಕೆ ಹೊರಡೋಣ್ವೋ'' ಸೋಮಿ ತಾನುಟ್ಟಿದ್ದ ಸೀರೆ ನಿರಿಗೆ ಹಿಡಿಯುತ್ತ ಬಂದು ಕೇಳಿದಳು.

''ಲೇ ನೆನ್ನೆನೇ ಹೇಳಿದ್ನಲ್ಲೇ ಹತ್ತೂವರೆಗೆ ಹೊರಡೋಣ ಅಂತ ಇನ್ನು ಏನೇ ಶಕುನ ಕೇಳ್ತಿದೀಯ'' ಅಸಹನೆಯಿಂದ ಅರಚಿದ ಸೋಮು.

'ಅಲ್ಲರೀ ಅಲಮೇಲಮ್ಮ ಹೇಳಿದ್ರು ಹತ್ತೂವರೆಗೆ ಹೊರಟ್ರೆ ಅದ್ಯಾವುದೋ ನಕ್ಷತ್ರದ ಮೇಲೆ ಇನ್ಯಾವ್ದೋ ನಕ್ಷತ್ರ ಬಂದಿರುತ್ತಂತೆ ಅದಿಕ್ಕೆ.''

''ಅವಳ್ಯಾವೋಳೇ ಅಲಮೇಲಮ್ಮ ನಿನ್ನ ತಲೆ ಕೆಡಿಸಿದೋಳು ಸುಮ್ನೆ ನಡಿಯೇ ಶಕುನ ನೋಡ್ತಾ ಕೂತ್ರೆ ಯಾವುದಾದರೂ ಶಕುನಿ ಬಂದು ವಕ್ರಿಸ್ತಾನೆ''

ಸೋಮು ಹಾಗಂತಿದ್ದ ಹಾಗೇ ತಲೆ ಮೇಲಿನ ಟೋಪಿ ತೆಗೆದು ಅದರಿಂದಲೇ ಗಾಳಿ ಬೀಸಿಕೊಂಡು ಅಬ್ಬಬ್ಬ ಅಬ್ಬಬ್ಬ ಅನ್ನುತ್ತಾ ಒಳಗೆ ಬಂದರು ಸೋಮಿ ಅಪ್ಪ.

''ಒಂದ್ಲೋಟ ಮಾವಿನ ಹಣ್ಣಿನ ಜ್ಯೂಸ್ ಕೊಡಮ್ಮ ಮೊದಲು'' ಅಂದರು.

''ಮಾವ ನೀವು ಹೆಸರು ಛೇಂಜ್ ಮಾಡ್ಕೊಳೋದು ಒಳ್ಳೇದು'' ಅಂದ ಸೋಮು ಹೇಳಲೋ ಬೇಡವೋ ಅಂತ ಅನುಮಾನ ಪಟ್ಟು ಹೇಳೇಬಿಟ್ಟ. 'ನಾವು ಈಗ ತಾನೇ ಶಕುನಿ ವಿಚಾರ ಮಾತಾಡ್ತಿದ್ವು ಅಷ್ಟು ಹೊತ್ತಿಗೆ ನೀವು ಸರಿಯಾಗಿ ಬಂದ್ರಿ.'

''ಅಳಿಯಂದಿರು ತಮಾಷೆ ಮಾಡೋದು ಬಿಟ್ಟಿಲ್ಲ'' ಅಂದರು ಮಾವ.

ಸೋಮಿ ''ಅಪ್ಪಾ ಮಾವಿನ ಹಣ್ಣು ತಂದಿಲ್ಲ. ನಿಂಬೆ ಜ್ಯೂಸ್ ಕೊಡ್ಲಾ'' ಅಂದಳು.

ನಿಂಬೆ ಜ್ಯೂಸು..., ಜ್ಯೂಸೇ ಅಲ್ಲಮ್ಮ ಅದು ಕಂಜ್ಯೂಸು... ಹತ್ ಪೈಸಕ್ಕೊಂದು ನಿಂಬೆ ಹಣ್ಣು ಸಿಕ್ಕತ್ತೆ, ತಂದು ಯರ್ರಾ ಬಿರ್ರಿ ಹಿಸುಕಿದರೆ ಅಬ್ಬಬ್ಬ ಅಂದ್ರೂ ಹತ್ತುಲೋಟ ಜ್ಯೂಸ್ ತೆಗೀಬಹುದು. ಅದೇ ಮಾವಿನ ಹಣ್ಣಾದರೆ ಕೆಜಿಗೆ ಮೂವತ್ತು ರೂಪಾಯಿ ಅಬ್ಬಬ್ಬ ಅಂದ್ರೆ ಮೂರೋ ನಾಲ್ಕೊ ಗ್ಲಾಸು ಜ್ಯೂಸು ತೆಗೀಬಹುದು.''

ಮಾವನ ತರ್ಕ ಸೋಮುಗೆ ಸುತರಾಂ ಹಿಡಿಸಲಿಲ್ಲ. ಅವನಂದ ''ಮಾವ ಈಗ ನಾವು ಎಲ್ಲೋ ಹೊರಟಿದೀವಿ. ನಿಮಗೆ ಮಾವಿನ ಹಣ್ಣು ತಂದು ಜ್ಯೂಸ್ ಮಾಡಿಕೊಟ್ಟು ಹೋಗೋದು ತಡವಾಗುತ್ತೆ ಇವತ್ತು ಒಂದಿನ ಲಿಂಬೆ ಜ್ಯೂಸೇ ಕುಡೀರಿ''

''ಏನಯ್ಯ ಒಳ್ಳೆ ಕಂಜ್ಯೂಸಿನಂಗೆ ಮಾತಾಡ್ತಿದೀಯ... ಮಾವ ಬಂದಿದಾರೆ ಮಾವಿನ ಹಣ್ಣಿನ ಜ್ಯೂಸ್ ಕೊಡೋಕಾಗಲ್ವ. ನನಗಿಂತ ನೀವು ಎಲ್ಲೋ ಹೋಗೋದೇ ಮುಖ್ಯಾನಾ'' ಅಂದು ರೇಗಿದರು.

ಸರಿ ಇವತ್ತಿನ ಕೆಲಸ ಎಕ್ಕುಟ್‌ಹೋಯ್ತು. ಅಂತ ಸೋಮು ಬ್ಯಾಗ್ ಹಿಡ್ಕೊಂಡು ಮಾವಿನ ಹಣ್ಣು ತರಲು ಹೊರಟ.

ಎದುರಿಗೇ ನರಸಿಂಹ ಅಡ್ಡ ಆದ.

''ಎಲ್ಲಿಗೆ ಹೊರಟ್ಯೋ''

''ನಮ್ಮಾವ ಬಂದಿದಾರೆ ಕಣೋ ಮಾವಿನ ಹಣ್ಣು ತರೋಕೆ ಹೊರಟಿದೀನಿ''

''ಮಾವಿನ ಹಣ್ಣು ತರೋಕೆ ಮಾವನ ಹೆಣ್ಣನ್ನೇ ಕಳಿಸಬೇಕಿತ್ತು ನೀನ್ಯಾಕೆ ಹೊರಟೆ''

''ನೋಡು ತರ್ಲೆ ತೆಗೀಬೇಡ. ನಾವು ಯಾವುದೋ ಫಂಕ್ಷನ್‌ಗೆ ಹೋಗಬೇಕು ಅಷ್ಟರಲ್ಲಿ ಈ ಶನಿ ಬೇರೆ ಬಂದು ವಕ್ಕರಿಸಿಕೊಂಡ್ರು''

ಹಾಗನ್‌ಬೇಡ. ಯಾವುದಾದರೂ ಕೆಲಸಕ್ಕೆ ಹೊರಟಾಗ ಮಾವ ಅದರಲ್ಲೂ ಹೆಣ್‌ಕೊಟ್ಟ ಮಾವ ಅಡ್ಡ ಬರೋದು ಅಂದ್ರೆ ಗುಡ್ ಸೈನ್.

''ಬಾಯಿ ಮುಚ್ತೀಯಾ''

ಅದ್ಸರಿ ನೀನು ಎಲ್ಲಿಗೆ ಹೋಗ್ತಿದ್ದೆ

''ಸೈಟ್ ನೋಡೋಣ ಅಂತ... ನಮಗೆ ಎಲ್ಲ ಅನುಕೂಲ ಆಗೋ ತರಹ ಇತ್ತು. ಇವತ್ತು ನಾನು ಹೋಗದಿದ್ರೆ ಅದು ಬೇರೆ ಯಾರಿಗಾದರೂ ಡೀಲ್ ಆಗಿಬಿಡುತ್ತೆ''

''ಅದೂ ಒಳ್ಳೇದಕ್ಕೆ ಅಂದ್ರೆ''

ಅದೇಗೆ

ನಾನೊಂದ್ಸಾರಿ ಹೀಗೆ ಸೈಟ್ ತಗೊಳ್ಳೋಣ ಅಂತ ಹೊರಟಿದ್ದೆ ನಮ್ಮಾವ ಅಡ್ಡ ಬಂದ್ರು ನಾನೂ ಬೈಕೊಂಡೆ. ಆಮೇಲೆ ನೋಡಿದ್ರೆ ಆ ಸೈಟು ತುಂಬಾ ರಾಮಾಯಣದ್ದು ನನ್ನ ಬದಲಿಗೆ ಅಡ್ವಾನ್ಸ್ ಕೊಟ್ಟೋನು ದುಡ್ಡು ಕಳ್ಕೊಂಡ ಈಗ ಹೇಳು ಮಾವ ಅಂದ್ರೆ ಕೆಟ್ಟ ಶಕುನಿನೋ ಒಳ್ಳೆ ಶಕುನನೋ.

''ಎಲ್ಲ ಕೇಸಲ್ಲೂ ಹಾಗೇ ಆಗಬೇಕೂಂತಿಲ್ವಲ್ಲ... ನನ್ದು ಪ್ರಾಬ್ಲಮ್ ಇರೋ ಸೈಟಲ್ಲ... ಹಾಳಾಗ್ ಹೋಗ್ಲಿ ಮಾವನಿಗೆ ಹಣ್ಣಿನ ಜ್ಯೂಸ್ ಕೊಟ್ಟು ಸಾಗ್‌ಹಾಕ್ತೀನಿ'' ಅಂದು ಸೋಮು ಹಣ್ಣು ತಗೊಂಡು ಹೊರಟ.

ಮಾವ ಎರಡು ಲೋಟ ಜ್ಯೂಸ್ ಕುಡಿದರೂ ಎದ್ದು ಹೋಗೋ ಹಾಗೆ ಕಾಣಲಿಲ್ಲ.

ಕಡೆಗೂ ಸೋಮ ಭಂಡ ಧೈರ್ಯದಿಂದ ''ಮಾವ ನಾವೆಲ್ಲೋ ಇಂಪಾರ್ಟೆಂಟ್ ಕೆಲಸಕ್ಕೆ ಹೊಗ್ತಿದೀವಿ ನೀವು ಹೊರಡ್ತೀರಾ'' ಅಂದ.

ಮಾವ ಎದ್ದು ನಿಂತು ''ಅದಿಕ್ಕೇನು ಬಂದ ಕೆಲಸ ಆದಮೇಲೆ ಇಲ್ಲಿದ್ದು ಏನು ಮಾಡ್ಲಿ'' ಅಂದು ಹೊರಟರು.

ಅವರು ಹೋದೊಡನೇ ಸೋಮು ಆತುರಪಡಿಸಿದ.

ಸೋಮಿ ಹೊರಡು ಹೊರಟು. ಪಾಲಿ ನನಗೋಸ್ಕರ ಕಾಯ್ತಿರ್ತಾನೆ ಆಮೇಲೆ ಒಂದು ಮಾತು. ಮೊದಲು ಸೈಟ್ ನೋಡೋಣ. ಡಾಕ್ಯುಮೆಂಟ್ಸ್ ನೋಡೋಣ ಎಲ್ಲ ಸರಿ ಇತ್ತು ಅಂದರೆ ಅಡ್ವಾನ್ಸ್ ಕೊಡೋಣ. ನಡಿ ನಡಿ'' ಅಂದ.

ಅವನು ಅಷ್ಟು ಆತುರ ಪಡಿಸ್ತಾ ಇದ್ರೆ, ಸೋಮಿ ಮಾತ್ರ ನಿಧಾನವಾಗಿ ಅವನ ಕಡೆ ನೋಡಿ ''ರೀ ಇವತ್ತೇ ಹೋಗಬೇಕಾ'' ಅಂತ ಕೇಳಿದಳು.

''ನೀನೇ ಬಡ್ಕೊತಾ ಇದ್ಯಲ್ಲೇ ಸೈಟು ಸೈಟು ಅಂತ''

''ಹೌದೂರಿ ಆದರೆ ಇವತ್ತಿಂದ ಬಡ್ಕೊಳೊಲ್ಲ''

''ಯಾಕೆ''

''ನೀವು ಸೈಟ್‌ಗೆ ಕೊಡೋಕೇಂತ ಅಡ್ವಾನ್ಸ್ ಒಂದು ಲಕ್ಷ ನನ್ನತ್ರ ಕೊಟ್ಟಿದ್ರಲ್ಲ ಅದನ್ನ''

''ಅದನ್ನ ಏನೇ ಮಾಡ್ದೆ''

''ನಮ್ಮಪ್ಪ ಒಂದು ಸೈಟ್ ತಗೋತಾ ಇದಾರಂತೆ ಅದಿಕ್ಕೆ ಅಡ್ವಾನ್ಸ್ ಕೊಡಬೇಕಾಗಿತ್ತಂತೆ ಅದಿಕ್ಕೆ ಕೊಟ್‌ಬಿಟ್ಟೆ''

''ನಿನಗೆ ತಲೆ ಸರಿ ಇದೆಯೇನೇ ಅವರಿಗೆ ಬೇಕಾಗಿರೋದು ಆರಡಿ ಮೂರಡಿ ಸೈಟು ಅದಿಕ್ಕೆ ನಾವ್ಯಾಕೆ ದುಡ್ ಕೊಡಬೇಕು''

''ರೀ ಆ ಸೈಟು ಆಮೇಲೆ ನಮ್ದೇ ತಾನೇ''

''ಹಾಗಂತ ಅವರು ಸಾಯೋತನಕ ಕಾಯೋಕಾಗುತ್ತ''

''ಏನ್ರೀ ನಮ್ಮಪ್ಪ ಸಾಯೋ ವಿಚಾರ ಮಾತಾಡ್ತೀರ'' ಅಂತ ಅಂದು ಗಂಗಾ ಕಾವೇರಿ ಹರಿಸಿದಳು.

ಮಾವ ಕಂಡ್ರೆ ನಾಲ್ಕು ತಟ್ಟಿಬಿಡೋಷ್ಟು ಕೋಪ ಬಂತು. ''ಹಾಗಲ್ವೆ'' ಅಂತ ಸಮಾಧಾನ ಮಾಡೋಕೆ ಹೋದರೂ ಅವಳು ಸರಿ ಹೋಗಲಿಲ್ಲ.

ಇದ್ದಿದ್ ದುಡ್ಡನ್ನ ಮಾವನಿಗೆ ಕೊಟ್ಟು ಕಳಿಸಿದಾಳೆ ಇನ್ನು ಸೈಟ್ ಗತಿ ಏನಪ್ಪ ಅಂತ ಪರದಾಡಿದ ಸೋಮು.

ಅಷ್ಟರಲ್ಲಿ ಸೀಪಾತಿ ಓಡಿಬಂದ. ''ನೀನು ಪಾಲಿ ಹತ್ರ ಸೈಟ್ ತಗೋತಾ ಇದೀಯಾ'' ಅಂತ ಕೇಳ್ದ.

''ಹೌದು ಯಾಕೆ.''

ಅವನೊಬ್ಬ ದೊಡ್ಡ ಫ್ರಾಡು. ಒಂದೇ ಸೈಟ್‌ನ ನಾಲ್ಕು ಜನಕ್ಕೆ ಮಾರಿದಾನೆ ನೀನು ಸೇರಿದ್ರೆ, ಐದನೆಯವನಾಗ್ತಿದ್ದೆ. ದುಡ್ಡು ಕೊಟ್ಟಿಲ್ಲ ತಾನೇ ಅಂದ.

''ಇನ್ನೂ ಇಲ್ಲ ಇವತ್ತು ಕೊಡಬೇಕಾಗಿತ್ತು.''

''ಸದ್ಯ ಕೊಡಲಿಲ್ಲ ಬಿಡು... ಹುಷಾರಪ್ಪ ಸೈಟಿಗೆ ಕೈ ಹಾಕಬೇಕಾದರೆ ಸ್ವಲ್ಪ ಯೋಜನೆ ಮಾಡು'' ಅಂತ ಹೇಳಿ ಸೀತಾಪತಿ ಹೊರಟ.

''ಹಾಗಾದ್ರೆ, ಮಾವ ಬಂದಿದ್ದು ಹಣ ತಗೊಂಡ್ ಹೋಗಿದ್ದು ಒಳ್ಳೆ ಶಕುನವೇ ಅಂತ ಯೋಚಿಸಿದ ಸೋಮು.

ಅಷ್ಟರಲ್ಲಿ ಫೋನ್ ಬಂತು

ಮಾವನ ಫೋನಿರಬೇಕು ಅಂತ ಅಂದ್ಕೊಂಡ.

ಸೋಮಿ ಖುಷಿಯಿಂದ ಮಾತಾಡ್ತಿದ್ಲು. ಹೌದಾ ಹೌದಾ ಅಂತಿದ್ಲು ಗ್ರೇಟ್ ಅಂದ್ಲು.


ಫೋನಲ್ಲಿ ಮಾತಾಡಿ ಬಂದು ರಪ್ಪಂತ ಸೋಮು ಬೆನ್ ಮೇಲೆ ಹೊಡೆದಳು.

''ರೀ ನಮ್ಮಪ್ಪ ನಮಗೊಂದು ಫ್ಲಾಟ್ ಕೊಡಿಸ್ತಿದಾರೆ ಮುಂದಿನ ತಿಂಗಳೇ ಗೃಹಪ್ರವೇಶ'' ಅಂದಳು.

''ಲೇ ಒಂದು ಲಕ್ಷಕ್ಕೆ ಎಂಥಾ ಫ್ಲಾಟೇ'' ಅಂದ.

''ಅಯ್ಯೋ ಅವರು ತಗೊಂಡ್ ಹೋಗಿದ್ದು ಬರೀ ರಿಜಿಸ್ಟ್ರೇಷನ್‌ಗೆ ಫ್ಲಾಟ್ ಕೊಡಿಸ್ತಿರೋದು ಅವರೇ ಇಟೀಸ್ ಮೈ ಗಿಫ್ಟ್ ಅಂದ್ರು... ಮೈ ಡ್ಯಾಡಿ ಗ್ರೇಟ್'' ಅಂದು ಕುಣಿದಾಡಿದಳು.

ಮಾವಂದಿರು ಎಲ್ಲ ಕಾಲದಲ್ಲೂ ಶಕುನಿಗಳಲ್ಲ ಅಂತ ಸೋಮು ಅವತ್ತು ಅರ್ಥ ಮಾಡ್ಕೊಂಡ.



ಹೀಗೂ ಆಗಬಹುದೇ?!

- ವಿ. ಪ್ರಾಣೇಶ್‌ರಾವ್

1. ಸಂಜೀವಿನಿ ಲೇಹ್ಯ

ನಮ್ಮ ರಾಮಾಚಾರ್ರಿಗೆ ತೀರ್ಥ ತಗೊಂಡ್ರೆ ಶೀತ. ಮಂಗಳಾರತಿ ತಗೊಂಡ್ರೆ ಉಷ್ಣ. ನಾ. ಕಸ್ತೂರಿ ಅವರು ಹೇಳೊ ಹಾಗೆ ಪ್ರಸಾದ ತಗೊಂಡ್ರೆ ಅಜೀರ್ಣವೂ ಆಗುತ್ತೋ ಏನೋ. ಈ ವಿಷಯ ಮಾತ್ರ ನನಗೆ ಸರಿಯಾಗಿ ಗೊತ್ತಿಲ್ಲ. ಇರಲಿ. ಇನ್ನು ಲಕ್ಷ್ಮಣಾಚಾರ್ರಿಗೆ ಉಡುಪಿಯಲ್ಲಿ ಮಳೆ ಬಂದರೆ ಇಲ್ಲಿ ಸೀನು ಬರುತ್ತದೆ. ಉಡುಪಿಯಲ್ಲಿ ಮಳೆ ಬರುವುದಿರಲಿ ಮೊನ್ನೆ ಮಧ್ಯಾಹ್ನ ಮೈಸೂರಿನಲ್ಲಿ ಮಳೆ ಸುರಿದಾಗ ಮದರಾಸಿನ ಮಳೆ ನೆನೆದು ಲಕ್ಷ್ಮಣಾಚಾರ್ರು ಥರಗುಟ್ಟಿಹೋದ್ರು. ದೇವರಾಜಾ ಮಾರ್ಕೆಟ್ ನೆಲಸಮ ಮಾಡ್ತಾರೆ ಅಂತ ಗಂಗಾಧರ ಮೊದಲಿಯಾರರ ಲೇಖನ ಓದಿದಾರಭ್ಯ ಆಚಾರ್ರ ಮನಸ್ಸು ಮೂರು ಹೊತ್ತೂ ಆ ಮಾರುಕಟ್ಟೆಯಲ್ಲೇ ಸುತ್ತುತ್ತದೆ. ಮನೆಯಲ್ಲಿ ಬೇಡವೆಂದರೂ ಆ ದಿನ ಮೋಡ ಕಟ್ಟಿದ್ದೂ ನೋಡಿ ಲಕ್ಷ್ಮಣಾಚಾರ್ರು ಮಾರುಕಟ್ಟೆಗೆ ಹೋದರಲ್ಲ ಸುರಿಯಿತು ನೋಡಿ ''ಧೋ'' ಎಂದು ಮಳೆ. ಮಳೆಯಲ್ಲಿ ತೊಯ್ದು ತೊಪ್ಪಡಿಯಾದ ಆಚಾರ್ರಿಗೆ ಸೀನಿನ ಮೇಲೆ ಸೀನು. ಹತ್ತಿರದಲ್ಲೇ ಇದ್ದ ಹೋಟೆಲಿನಲ್ಲಿ ಬಿಸಿ ಬಿಸಿ ಕಾಫಿ ಕುಡಿದು ಸ್ವಲ್ಪ ಸುಧಾರಿಸಿಕೊಂಡರು. ಮತ್ತೆ ಸ್ವಲ್ಪ ಹೊತ್ತಿಗೆ ಸೀನು ಶುರುವಾದವು.

ಲಕ್ಷ್ಮಣಾಚಾರ್ರು ಮೊದಲು ಹೋಮಿಯೋಪತಿಗೆ ಮೊರೆ ಹೋದವರು ಇತ್ತೀಚೆಗೆ ಯಾಕೋ ಆಯುರ್ವೇದದ ಕಡೆಗೆ ತಿರುಗಿದ್ದಾರೆ. ಅವರ ಗುರುತಿನ ಆಯುರ್ವೇದದ ಅಂಗಡಿಯವನು ''ನಿಮ್ಮ ಅನಾರೋಗ್ಯವೇ ನಮ್ಮ ಮಹಾಭಾಗ್ಯ'' ಎನ್ನುತ್ತಿರುತ್ತಾನೆ. ಲಾರಿ ಬೆಟ್ಟದಲ್ಲಿ ಮುಗಚಿಕೊಂಡರೆ ಖಾದರ್‌ವಲಿ ಗ್ಯಾರೇಜಿನಲ್ಲಿ ಮೊಹರಂ ಆಚರಿಸಿದಷ್ಟು ಸಂಭ್ರಮ. ಏಕೆಂದರೆ ಬೆಟ್ಟದಲ್ಲಿ ಮುಗುಚಿಕೊಂಡ ಲಾರಿ ರಿಪೇರಿಗೆ ಬರುವುದು ಖಾದರ್‌ವಲಿ ಗ್ಯಾರೇಜಿಗೆ ತಾನೆ.

ಆಚಾರ್ರು ಅಂಗಡಿಗೆ ಹೋದಾಗ ಅವನು ಯಾವುದೋ ಕಪ್ಪು ಬಣ್ಣದ ಲೇಹ್ಯವನ್ನು ಇವರ ಕೈಗಿತ್ತ. ಆಚಾರ್ರು ಸೀನುಗಳ ಮಧ್ಯೆ ಸುಧಾರಿಸಿಕೊಂಡು 'ಇನ್‌ಗ್ರೀಡಿಯಂಟ್ಸ್' ನೋಡುವಾಗ ಒಂದು ಐಟಂ - ಮಾಂಸರಸ - ಇವರ ಉಸಿರನ್ನೇ ನಿಲ್ಲಿಸುವಂತೆ ಮಾಡಿತು. ಲಕ್ಷ್ಮಣಾಚಾರ್ರು ಮೂರ್ಛೆ ಹೋಗುವುದೊಂದು ಬಾಕಿ. ಲೇಹ್ಯವನ್ನು ಎಡ್ಗೈಲೂ ಮುಟ್ಟದೆ ಅಲ್ಲಿಂದ ಹೊರಟು ಬಂದರು.

ಮನೆಯಲ್ಲಿ ರಾತ್ರಿ ಅಡುಗೆಗೆಂದು ಕ್ಯಾರೆಟ್ ಹೆಚ್ಚುತ್ತಿದ್ದ ಊರ್ಮಿಳಮ್ಮ ವಿಷಯ ತಿಳಿದು ಆಕಾಶ ಭೂಮಿ ಒಂದು ಮಾಡಿ ಅಂಗಡಿಯವನನ್ನು ಬಾಯಿಗೆ ಬಂದಂತೆ ಬಯ್ಯತೊಡಗಿದಳು. ಕ್ಯಾರೆಟ್ ಕೈಲಿ ಹಿಡಿದ ಊರ್ಮಿಳಮ್ಮ ಅಕ್ಷರಶಃ ಬೃಂದಾ ಕಾರಟ್ ಆಗಿದ್ದರು. ''ಅಲ್ಲಾರಿ ಆಯುರ್ವೇದ ಅಂದರೆ ಬರೀ ಗಿಡಮೂಲಿಕೆಗಳು ಹಣ್ಣು ಹಂಪಲುಗಳ ಸಾರದಿಂದ ಮಾಡಿದ್ದಲ್ಲವೇ?'' ಎಂದು ಗಂಡನನ್ನು ಕೇಳಿದಳು. ''ನಾನೂ

ಹಾಗೇ ತಿಳಿದುಕುಕೊಂಡಿದ್ದೆ ಮೊನ್ನೆ ಮೊನ್ನೆಯವರೆಗೂ...'' ಅಂತ ಇನ್ನೂ ಏನೋ ಹೇಳೊ ಅಷ್ಟರಲ್ಲಿ ಆಚೆಮನೆ ಆಂಜನೇಯ ಮನೆಯೊಳಕ್ಕೆ ಬಂದಿದ್ದ.

ಲಕ್ಷ್ಮಣಾಚಾರ್ರು ಅಂಗಡಿಯಲ್ಲಿ ಬಿಟ್ಟು ಬಂದಿದ್ದ ಲೇಹ್ಯದ ಬಾಟಲು ಅವನ ಕೈಯ್ಯಲ್ಲಿತ್ತು. ''ಆಚಾರ್ರೇ ಇದು 'ಸಂಜೀವಿನಿ ಲೇಹ್ಯ'! ಲಕ್ಷ್ಮಣ ಮೂರ್ಛೆ ಹೋದಾಗ ಆಂಜನೇಯ ತಂದ ಸಂಜೀವಿನ ಗಿಡಮೂಲಿಕೆಯಿಂದ ಮಾಡಿದ್ದು! ನೀವು ಅಂಗಡಿಯಲ್ಲೇ ಬಿಟ್ಟು ಬಂದಿದ್ದಿರಲ್ಲ. ಅಂಗಡಿಯವನು ಕಳಿಸಿಕೊಟ್ಟಿದ್ದಾನೆ'' ಎಂದ.

ಈ ಹೊತ್ತಿಗೆ ಸ್ವಲ್ಪ ಸುಧಾರಿಸಿಕೊಂಡಿದ್ದ ಆಚಾರ್ರು ಆಂಜನೇಯನಿತ್ತ ಲೇಹ್ಯವನ್ನು ಸಾವಧಾನ ಚಿತ್ತರಾಗಿ ಪರಾಂಬರಿಸಲಾಗಿ ಮಾಂಸರಸ ಎಂಬುದು ಕಾಣಲೇ ಇಲ್ಲ! ಅದರ ಜಾಗದಲ್ಲಿ ಮಾದಿಫಲರಸಾಯನ ಅಂತ ಇದ್ದದ್ದು ಆಶ್ಚರ್ಯ ಉಂಟು ಮಾಡಿತು.

ಅಂಗಡಿಯವನು ಲೇಬಲ್ ಛೇಂಜ್ ಮಾಡಿ ಕೊಟ್ಟನೇ. ಆಚಾರ್ರಿಗೆ ಅನುಮಾನ ಬರಲಿಲ್ಲ.

2. ಹೋಯೀ, ಹೋಯೀ!!

'ಊರು ಹೆಸರು ಬೇಡ' ಅಂತಾದರೂ ಅವನೊಬ್ಬ ಮಹಾ ಜಿಪುಣ - ಜಿಪುಣಾಗ್ರೇಸರ. ನನ್ನ ಆಪ್ತ ಸ್ನೇಹಿತ. ಬಹುಶಃ ಇವರ ವಂಶದಲ್ಲೇ ಇರಬೇಕು. ಇವರ ತಾತನ ತಾತನ ಮುತ್ತಾತ್ತನ ಮನೆಯಲ್ಲಿ ಸೂಜಿ ಮೊನೆಯಲ್ಲಿ ತುಪ್ಪ ಬಡಿಸುತ್ತಿದ್ದರು! ಒಂದು ಗೋಟಡಿಕೆಯನ್ನು ದಾರದಲ್ಲಿ ನೇತುಹಾಕಿ ಊಟದ ನಂತರ ಎಲ್ಲರೂ ಚೀಪುತ್ತಿದ್ದರು!! ಇಂಥ ವಂಶಸ್ಥನಿಗೆ ನಮ್ಮನೆಲ್ಲ ಒಮ್ಮೆ ಔತಣಕ್ಕೆ ಕರೆಯಲೇಬೇಕಾದ ಪ್ರಸಂಗ ಬಂತು.

ಅವನ ಅದೃಷ್ಟವೋ ನನ್ನ ದುರಾದೃಷ್ಟವೊ ಬಹಳ ಆಸೆ ಪಟ್ಟ ನನಗೆ ಔತಣಕ್ಕೆ ಹೋಗಲು ಆಗಲಿಲ್ಲ. ಆದರೆ ಊಟ ಮಾಡಿ ಬಂದವನೊಬ್ಬ ಹೇಳಿದ್ದೇನೆಂದರೆ...

''ಗುರೂ ಕಡುಬಿನ ಒಳಗೂ ಗೋಡಂಬಿ. ಕಡುಬಿನ ಹೊರಗೂ ಗೋಡಂಬಿ. ಪಾಯಸದಲ್ಲೂ ಗೋಡಂಬಿ ರಾಯತದಲ್ಲೂ ಗೋಡಂಬಿ. ಗೊಜ್ಜಿನಲ್ಲೂ ಗೋಡಂಬಿ ಸಜ್ಜಿಗೆಯಲ್ಲೂ ಗೋಡಂಬಿ. ಮೇಲೆ ದ್ರಾಕ್ಷಿಗೊಜ್ಜು!...'' ಎಂದ. ಆದರೆ ಲೊಟ್ಟೆ ಹೊಡೆಯಲಿಲ್ಲ.

''ಮೂಟೆಗಟ್ಟಲೆ ಗೋಡಂಬಿ ಕೊಂಡಿದ್ದಾನೋ ಅವನು?!'' ನಾನು ಕೇಳಿದೆ.

''ಇಲ್ಲ. ಆದರೆ ಅವನು ಅವನ ಹೆಂಡತಿ ಬಂದು 'ನೋಡಿ ಎಲ್ಲರೂ ಕೇಳಿ. ಗೋಡಂಬಿ ದ್ರಾಕ್ಷಿಯನ್ನು ಪಕ್ಕಕ್ಕೆ ಎತ್ತಿಟ್ಟು ಊಟಮಾಡಿ. ಅವು ತೋರಿಕೆಯ ದಿನಸಿ - ಪ್ಲಾಸ್ಟಿಕ್ ಗೋಡಂಬಿ ರಬ್ಬರ್ ದ್ರಾಕ್ಷಿ. ತಿನ್ನೋದಕ್ಕೆ ಬರೋದಿಲ್ಲ ನೋಡಿ. ಏನು ಅನ್ಕೋಬೇಡಿ. ಊಟಮಾಡಿ...' ಅಂದರು - ಎಕ್ಸ್‌ಟ್ರಾ ಉಪಚಾರವನ್ನು ಉಣಬಡಿಸಿ. ಒಳಗೂ ಹೊರಗೂ ಗೋಡಂಬಿ ಇದ್ರೂ ಇದು 'ಬ್ಯಾಡ್' ಅಲ್ಲರೀ ವರ್ಸ್ಟ್.' ಓಯೀ ಹೋಯೀ ಅಲ್ಲ ಹೋಯೀ ಹೋಯೀ'' ಎಂದ 'ಗುಡ್‌ಡೇ' ಆ್ಯಡ್ ನೆನಸಿಕೊಂಡ ನಮಗೂ ಅದೇ ನೆನಪಾಯಿತು. ನಾವೆಲ್ಲ ಘೊಳ್ಳನೆ ನಕ್ಕೆವು. ಅವನು ನಗಲಿಲ್ಲ.

3. 'ಏ' ಟು 'ಜಡ್'

ನಮ್ಮೂರಿನ ಕಲ್ಲಂಭಟ್ಟರಿಗೆ ಸಂಗೀತ ಸಾಹಿತ್ಯ ಎಂದರೆ ಎಲ್ಲಿಲ್ಲದ ಪ್ರೀತಿ. ಪ್ರತಿ ತಿಂಗಳೂ ಅವರು ಆಯೋಜಿಸುವ 'ಸಂಗೀತ ಭಾರತಿ' ಕಾರ್ಯಕ್ರಮಗಳಲ್ಲಿ ಆಧ್ಯಾತ್ಮದ ಜತೆ ಜತೆಗೆ ಹಾಸ್ಯ ರಸಾಯನವೂ ಇರುತ್ತದೆ.

ಇಂಥದೊಂದು ಸಭೆಯಲ್ಲಿ ನಮ್ಮೂರಿನ ಹಿರಿಯರೂ ಶರಣ ಗುಣ ಸಂಪನ್ನರೂ ಆದ ಜಂಬಣ್ಣನವರು ವಿವರಿಸಿದ ಒಂದು ವಧು ಪರೀಕ್ಷೆಯ ಪ್ರಸಂಗ ತುಂಬ ಸ್ವಾರಸ್ಯಕರವಾಗಿದೆ.

ಭಾವಿ ಮದುಮಗಳು ನೋಡಲು ಒಳ್ಳೆಯ ಲಕ್ಷಣವಾದ ಹುಡುಗಿ. ಕಲೀನ ಮನೆತನದವಳು. ಪದವೀಧರೆ. ಹುಡುಗಿಗೆ ಹಾಡು ಹಸೆ ಬರುತ್ತದೊ ಎಂದು ಕೇಳಿದರು. ಹುಡುಗಿ ಸೊಗಸಾಗಿ ಒಂದು ದೇವರ ನಾಮವನ್ನು ವಚನವನ್ನು ಹಾಡಿ ತೋರಿಸಿತು. ನಂತರ ಪತ್ರಿಕೆ ಕೊಟ್ಟು ಓದಲು ಹೇಳಿದರು. ನಮ್ಮ ಮಗಳು ಪದವೀಧರೆ. ಪತ್ರಿಕೆ ಓದುಸುತ್ತೀರಲ್ಲ ಎಂದಾಗ ಕನ್ನಡಕ ಹಾಕಿರೋದರಿಂದ ಕಣ್ಣು ಐಬೇ ಎಂದು ಪರೀಕ್ಷಿಸಿದೆವು ಎಂದರು. ಅಡುಗೆ ಮಾಡಲು ಕಲಿಸಿದ್ದೀರಾ ಎಂದಾಗ ''ಓ ಅದಕ್ಕೇನಂತೆ 'ಏ' ಟು 'ಜಡ್' ಮಾಡುತ್ತಾಳೆ...'' ಎಂದಳು ಹುಡುಗಿಯ ತಾಯಿ.

ಸಾಂಗೋಪಾಂಗವಾಗಿ ಮದುವೆ ಜರುಗಿತು. ಹುಡುಗಿ ಗಂಡನ ಮನೆಗೆ ಹೋದಳು. ಒಂದು ದಿನ ''ಅಡುಗೆ ಮಾಡು ನೋಡುವ'' ಎಂದರು. ನೋಡುವುದೇನು ಒಂದು ಅನ್ನ, ನೀರಾಗಿ ಝುಣುಕ ಮಾಡಿ ಬಡಿದಳು. (ಈರುಳ್ಳಿ ಒಗ್ಗರಣೆಗೆ ನೀರಲ್ಲಿ ಕದರಿಸಿದ ಕಡಲೆ ಹಿಟ್ಟನ್ನು ಸೇರಿಸಿ ಕುದಿಸಿ ಮಾಡುವ ಸಾಹಿತ್ಯ ಅಥವಾ ಸಾದನಿಗೆ ಝುಣುಕ ಎನ್ನುತ್ತಾರೆ. ಇದಕ್ಕೆ 'ಬೊಂಬಾಯಿ ಚಟ್ನಿ' ಎಂತಲೂ ಇನ್ನೊಂದು ಹೆಸರು, ಪೂರಿ ಚಪಾತಿಗೂ ಅನ್ನಕ್ಕೂ ಇದು ಬರುತ್ತದೆ.) ಎರಡನೆಯ ದಿನ ಅದೇ ಅನ್ನ. ಸೌಟಿಗೆ ಜಾರುವಷ್ಟು ದಪ್ಪನೆ ಝುಣುಕ. ಮೂರನೇ ದಿನವೂ ಅದೇ ಅನ್ನ. 'ಪಿಟ್ಲ್ಯ' ಎನ್ನುತ್ತಾರಲ್ಲ ಗಟ್ಟಿ ಝುಣುಕ. ''ಇದೇನೇ ನಿಮ್ಮಮ್ಮ ಕಲಿಸಿದ್ದು. 'ಏ' ಟು 'ಜಡ್' ಬರುತ್ತೇಂದ್ರು!'' ಅತ್ತೆ ಮೂತಿಯನ್ನು ಎಡಕ್ಕೆ ತಿರುವಿದರು. ''ಅದೇ ಅತ್ತೆ. ಸರಿಯಾಗಿಯೇ ಇದೆಯಲ್ಲ. 'ಏ' ಅಂದ್ರೆ 'ಅನ್ನ' 'ಜ಼ಡ್' ಅಂದ್ರೆ 'ಝುಣುಕ' ಮತ್ತಿನ್ನೇನು'' ಸೊಸೆ ಮೂತಿಯನ್ನು ಬಲಕ್ಕೆ ತಿರುವಿದಳು.

4. ಜ್ವರ

''ಅಲೋಽ''

''ಅಲೋಽ''

ಆಕಡೆ ಇದ್ದವರು ಸಾಹೇಬರೇ ಇರಬೇಕೆಂದು ಈಕಡೆ ಇದ್ದವರು ಭಾವಿಸಿ ತಮ್ಮ ಪ್ರವರವನ್ನು ಬಿಚ್ಚಿದರು.

''ಅಲ್ಲ ಸಾರು ಇಲ್ಲಿ ಇವಕ್ಕೆ ಜ್ವರ ಬಂದಿದೆ. ಆಹಾರ ಏನೂ ಕೊಡ್ತಾ ಇಲ್ಲ. ಔಸ್ತಿ ಏನು ಕೊಡೋದು ಅಂತ ಕೇಳ್ಬೇಕಿತ್ತು.'' ''ಸಾರೂ...'' ಅಂತ ಇನ್ನೂ ಏನೋ ಕೇಳೋದರಲ್ಲಿ ಫೋನು ಗೊರ ಗೊರ ಅಂದು ಮತ್ತೆ ಚಾಲೂ ಆಯಿತು.

ಸಾಹೇಬರೇ ಇರಬೇಕೆಂದು ಅಂದುಕೊಂಡಿದ್ದರಲ್ಲ ಆ ವ್ಯಕ್ತಿ ಶುರು ಹಚ್ಚಿಕೊಂಡಿತು.

''ನಿಮ್ಗೊವಕ್ಕೆ ಜ್ವರ ಬಂದದೆ ಅಂತಿದ್ದೀರಾ. ಒಂದ್ ಕೆಲಸ ಮಾಡಿ. ಸದ್ಯಕ್ಕೆ ಜಾಸ್ತಿ ಏನೂ ಬೇಡ...'' ಎಂದಿತು. ಫೋನು ಮಾಡಿದವರಿಗೆ ಸಖತ್ ಆಶ್ಚರ್ಯವಾಗಿ ಅವರು ಮಧ್ಯೆ ಬಾಯಿ ಹಾಕಿ ''ಮಗೂಗಲ್ಲರೀ ಜ್ವರ ಬಂದಿರೋದು'' ಅಂತ ಹೇಳ ಹೊರಟರು. ಆದರೆ ಆ ಸಾಮಿ ಅವರನ್ನು ತಡೆದು, ''ಮಗೂಗಲ್ಲಿದ್ರೆ ಏನು ಮಾವಿನ ಮರಕ್ಕೆ ಜ್ವರಾ ಬರುತ್ತಾ...'' ಎಂದು ಅವರ ಬಾಯಿಕಟ್ಟಿ ತನ್ನ ಮಾತು ಮುಂದುವರೆಸಿತು.

''ನಿಮ್ಮಲ್ಲಿ ನವಲಗುಂದ ರವೆ ಸಿಕ್ತದಲ್ಲ. ಒಂದು ಹನಿ ತುಪ್ಪ ಹಾಕಿ ಚಂದಾಗಿ ಹುರಿದು ನೀರು ಸೇರಿಸಿ ರವೆಗಂಜಿ ಮಾಡಿ ಕುಡಿಸಿ. ಮೂಗಿಗೆ ವಿಕ್ಸ್ ತಿಕ್ಕಿ...''

ಫೋನು ಮಾಡಿದವರಿಗೆ ಮಾತನಾಡುತ್ತಿರುವವರು ಸಾಹೇಬರಲ್ಲವೆಂದು ಖಾತ್ರಿಯಾಗಿ ಅವರಿಗೆ ರೇಗಿ ಹೋಯಿತು. ಅವರು, ''ರೀ ಸ್ವಾಮಿ ನಮ್ ಮಗೂಗಲ್ಲರೀ ಜ್ವರಾ ಬರ್ತಾ ಇರೋದು. ರೇಷ್ಮೆ, ರೇಷ್ಮೆ ಹುಳಗಳಿಗೆ. ರೇಷ್ಮೆ ಹುಳಗಳಿಗೆಲ್ಲಾದರೂ ರವೆಗಂಜಿ ಕುಡಿಸ್ತಾರೇನ್ರೀ. ವಿಕ್ಸ್ ತಿಕ್ಬೇಕಂತೆ ವಿಕ್ಸು. ರೇಷ್ಮೆ ಸಾಹೇಬ್ರಿದ್ರೆ ಫೋನ್ ಕೊಡ್ರಿ. ಇಲ್ಲ ಇಡ್ರಿ ಫೋನು...'' ಎಂದು ಕಂಡಾಪಟ್ಟೆ ಗದರಿದರು. ಆಗ ಫೋನೂ ಕಟ್ಟಾಯಿತು. ಗಂಜಿ ಕುಡಿಸಿ ಎಂದವರ ಮುಖ ಇಂಗುತಿಂದ ಮಂಗನಂತಾಗಿತ್ತು. ಸಂಬಂಧವಿಲ್ಲದವರು ಫೋನ್ ತೆಗೆದುಕೊಂಡರೆ ಹೀಗಲ್ಲದಿದ್ದರೆ ಇನ್ನು ಹೇಗಾದೀತು.

5. ಅವನದೇ ಫೋಟೊ

ಗುಂಡನಿಗೆ ಫೋಟೊ ತೆಗೆಸಿಕೊಳ್ಳುವುದೆಂದರೆ ಎಲ್ಲಿಲ್ಲದ ಅಲರ್ಜಿ. ತಾನು ಫೋಟೋಜೆನಿಕ್ ಅಲ್ಲವೆಂದು ಅವನ ನಂಬಿಕೆ ಹಾಗೂ ಅತಿಯಾದ ಬೇಸರ. ಫೋಟೊ ತೆಗೆಸಿಕೊಳ್ಳಲೇಬೇಕಾದ ಸಂದರ್ಭ ಬಂದಾಗ ಬಲು ಒದ್ದಾಡಿಬಿಡುತ್ತಿದ್ದ. ಜೀವನದಲ್ಲಿ ಒಂದೆರಡು ಸಂದರ್ಭ ಬಿಟ್ಟರೆ ಅವನು ಫೋಟೋ ತೆಗೆಸಿಕೊಳ್ಳದೇ ಬಿಟ್ಟದ್ದೇ ಹೆಚ್ಚು. ತನನ ಮದುವೆ ಮೊದಲು ಹುಡುಗಿಯ ಕಡೆಯವರು ಫೋಟೊ ಕೇಳಿದಾಗಲೂ ಕಳುಹಿಸದೆ ಕನ್ಯಾ ಪರೀಕ್ಷೆಗೆ ತಾನೇ ಖುದ್ದಾಗಿ ಹಾಜರಾಗಿದ್ದ. ಹೆಸರಿಗೆ ತಕ್ಕ ಹಾಗೆ ಗುಂಡು ಗುಂಡಗೆ ಇದ್ದ ಗುಂಡು ಮೋರೆಯ ಗುಂಡನನ್ನು ಮನಸಾರೆ ಮೆಚ್ಚಿ ಗುಂಡಿ ಮದುವೆ ಮಾಡಿಕೊಂಡಿದ್ದಳು.

ಈಗ ಗುಂಡನಿಗೆ ವಯಸ್ಸಾಗಿದೆ. ತಲೆ ಮುಂಚಿಗಿಂತಲೂ ಈಗ ಹೆಚ್ಚು ಬೋಳಾಗಿದೆ. ಹೆಚ್ಚು ಬೋಳು ಏನು ಬಂತು. ತಲೆ ಹುಣಿಸೇ ಹಣ್ಣು ಹಾಕಿ ತೊಳೆದಿಟ್ಟ ತಾಮ್ರದ ಚೊಂಬು, ಫಳಫಳ ಫಳಫಳ ಅಂತ ಹೊಳೆಯುತ್ತಿರುತ್ತದೆ. ಇಡೀ ತಲೆಯಲ್ಲಿ ಎಲ್ಲಿ ಹುಡುಕಿದರೂ ಒಂದು ಕೂದಲೂ ಇಲ್ಲ. ಬಿಸಿಲಿಗೆ ತಲೆ ಕಾದರೆ ಒಳ್ಳೆಯದಲ್ಲವೆಂದು ಗುಂಡಿ ಒಮ್ಮೊಮ್ಮೆ ಪ್ರೀತಿಯಿಂದ ಎಣ್ಣೆ ಸವರಿ ಕಳಿಸಿದರೆ ತಲೆ ಬೆಲ್ಜಿಯಂ ಗ್ಲಾಸಿನಂಥ ಹೊಳೆಯುವ ಕನ್ನಡಿ.

ಫೋಟೋಜೆನಿಕ್ ಅಲ್ಲದಿದ್ದರೂ ಫೋಟೋ ತೆಗೆಸಿಕೊಳ್ಳಲೇ ಬೇಕಾದ ಸಂದರ್ಭ ಬಂದಿದ್ದುದರಿಂದ ಅಂದು ಗುಂಡು ಸ್ಟುಡಿಯೊ ಒಂದರಲ್ಲಿ ಕಾಲಿರಿಸಿದ್ದ. ಅಲ್ಲಿ ಬಂದಿದ್ದ

ಒಂದಿಬ್ಬರು ಕಾಲೇಜ್ ವಿದ್ಯಾರ್ಥಿಗಳನ್ನು ನೋಡಿ ಗುಂಡನಿಗೆ ಮರುಕ ಉಂಟಾಯಿತು. ಅವರು ಅಪರಕರ್ಮ ಮಾಡಿದವರಂತೆ ತಲೆಯನ್ನು ನುಣ್ಣಗೆ ಬೋಳಿಸಿಕೊಂಡಿದ್ದರು! ಅದು ಇಂದಿನ ಫ್ಯಾಷನ್ ಅಂತೆ! ತನಗಂತೂ ವಯಸ್ಸಾಗಿ ಕೂದಲು ಉದುರಿ ಹೋಗಿದೆ. ತಲೆ ತುಂಬಾ ಕೂದಲು ಕಣಿದಾಡುವ ವಯಸ್ಸಿನಲ್ಲಿ ಇವರಿಗೆಲ್ಲ ಏನು ಬಂತಪ್ಪ ಕರ್ಮ ಅಂತ ಅಂದುಕೊಂಡ. 'ತಾ ಮಾಡಿದಾ ಕರ್ಮ ಬಲವಂತವಾದರೆ ಯಾರೇನು ಮಾಡುವರು ಅವನಿಯೊಳಗೆ...' ಎಂದು ಹಾಕಿಕೊಳ್ಳುತ್ತಾ ಅಲ್ಲಿದ್ದ ನಿಲುವುಗನ್ನಡಿಯಲ್ಲಿ ತನ್ನ ಮೋಹನಾಕಾರವನ್ನು ನೋಡಿಕೊಳ್ಳತೊಡಗಿದ. ಫೋಟೋ ತೆಗೆಸುವುದೋ ಬೇಡವೋ ಎಂದು ಮೀನಾ ಮೇಷ ಎಣಿಸುತ್ತಿರುವಾಗ ಸ್ಟುಡಿಯೋದ ಹುಡುಗ ಬಂದು ಅವನನ್ನು ಒಳಗೆ ಕರೆದೊಯ್ದ.

ಮುಗ್ಗಾಲಿನ ಮೇಲೆ ಕೂತ ಬಿಂಬ ಗ್ರಾಹಿಯ ಮೂಲಕ ಗುಂಡನ ಜೋಬದ್ರು ಮುಖವನ್ನು ಹಾಗೆ ಹೀಗೆ ಹೇಗೆ ಹೇಗೋ ನೋಡಿದರೂ ಸಮಾಧಾನವಾಗದೇ ಎಡಬಲ ಮೇಲೆ ಕೆಳಗೆ ಝುಗಮಗಿಸುವ ದೀಪಗಳನ್ನು ಹೊತ್ತಿಸಿ ಆರಿಸಿ ಬಿಳಿಕೊಡೆಯ ಅಡಿಯಲ್ಲಿ ನುಸುಳಿ ಏನಾಗುತ್ತಿದೆ ಎಂದು ಗುಂಡನಿಗೆ ಗೊತ್ತಾಗುವುದರೊಳಗಾಗಿ ಅವನು ಫೋಟೋದಲ್ಲಿ ಬೀಳುವಂತೆ 'ಛಕ್ಕೆಂದು' ಹುಡುಗ ಚಿತ್ರವನ್ನು ಕ್ಲಿಕ್ಕಿಸಿಬಿಟ್ಟಿದ್ದ. ಫೋಟೋಕ್ಕೆ ಎರಡು ದಿನ ಬಿಟ್ಟುಕೊಂಡು ಬನ್ನಿ ಎಂದಾಗ ಆರಾಮವಾಗಿ ಹೋದರಾಯಿತು ಬಿಡು ಎಂದು ಗುಂಡ ಸುಮ್ಮನಾದ.

ಅವನಿಗೆ ಹೇಗೂ ತಾನು ಫೋಟೋದಲ್ಲಿ ಚೆನ್ನಾಗಿ ಬಂದಿರುವುದಿಲ್ಲ ಎಂಬ ಅನುಮಾನ. ಕೆಲವು ದಿನಗಳ ನಂತರ ಅವನು ಸ್ಟುಡಿಯೋಗೆ ಹೋದಾಗ ಅವನಿಗೆ ಸಂತೋಷದಾಯಕವೂ ಆಶ್ಚರ್ಯಕರವೂ ಆದ ಸುದ್ದಿಯೊಂದು ಕಾದಿತ್ತು. ಅದೇಂದರೆ ಅವನ ಮುಖ ಸುಂದರವಾಗಿ ಫೋಟೋದಲ್ಲಿ ಬಂದಿತ್ತು ಎಂದಲ್ಲ. ಅದರ ಬದಲಾಗಿ ಅವನ ಮುಖದ ಜಾಗದಲ್ಲಿ ಫೋಟೋ ತೆಗೆದವನ ಮುಖ ಬಂದು ಕೂತಿತ್ತು! ಫೋಟೋ ತೆಗೆದವನಿಗೆ ಆಶ್ಚರ್ಯಾಘಾತವಾದರೂ ಸ್ವಲ್ಪದರಲ್ಲೇ ಸುಧಾರಿಸಿಕೊಂಡು ಗಿರಾಕಿ ಗುಂಡನ ನುಣ್ಣನೆಯ ತಲೆಯತ್ತ ತಲೆ ಎತ್ತಿ ನೋಡಿದ. ಅವನಿಗೆ ಎಲ್ಲವೂ ಅರ್ಥವಾಗಿ ಹೋಯಿತು. ಸಾರಿ ಸರ್, ಒಳಗೆ ಬನ್ನಿ ಇನ್ನೊಂದು ಒಳ್ಳೇ ಫೋಟೊ ತೆಗೆಯೋಣಂತೆ ಅಂತ ಅಂದ. ಗುಂಡ ಬೇಡವೇ ಬೇಡ ಎಂದು ಹೊರನಡೆದ.

6. ಲವ್ ಲೆಟರ್

ಅಂದು ಅವನೇಕೊ ತುಂಬ ಖುಷಿಯಲ್ಲಿದ್ದ. ಅವನು ತನಗೆ ಪ್ರಿಯವಾದ ಯಾವುದೊ ಹಳೆಯ ಹಾಡೊಂದನ್ನು ಗುಣ ಗುಣಿಸುತ್ತಾ ತನ್ನ ಛೇಂಬರಿನೊಳಗೆ ಬಂದು ಆಸೀನನಾದ. ವೇಳೆಗೆ ಜವಾನ ಅಂದಿನ ಟಪಾಲನ್ನು ತಂದು ಮೇಜಿನ ಮೇಲಿರಿಸಿ ಹೋದ. ಹಾಜರಿಯಲ್ಲಿ ಸಹಿ ಹಾಕಿ ಸಿಬ್ಬಂದಿ ತಂದ ಕಡತವನ್ನು ಪರಿಶೀಲಿಸಿ ಆದ ಮೇಲೆ ಕಾಫಿ ಬಂತು. ಆ ಬೆಳಿಗ್ಗೆ ಅವನ ಮನಸ್ಸು ಒಳ್ಳೆಯ ಲಹರಿಯಲ್ಲಿದ್ದುದರಿಂದ ಕಾಫಿ ಹೀರುತ್ತಾ ಒಂದೊಂದಾಗಿ ಟಪಾಲನ್ನು ನೋಡತೊಡಗಿದ. ಮೊದಲೆರಡು ಮೇಲಿನ ಕಛೇರಿಯ ಯಾವುದೊ ಆದೇಶಗಳು. ನಂತರ ಕೆಲವು ಕಟ್ಟಡ ಕಾಮಗಾರಿ ಬಿಲ್ಲುಗಳು.

ಆಮೇಲೆ ಒಂದೆರಡು ಅಹವಾಲುಗಳು, ಕೊನೆಯಲ್ಲಿ ಒಂದು ಅಂತರ್ದೇಶೀಯ ಪತ್ರ. ಗುಲಾಬಿ ವರ್ಣದ ಆ ಕಾಗದವನ್ನು ಓಂತಿರುಗಿಸಿ ಓದಿದಾಗ ಅದು ಕಛೇರಿಯ ಸಿಬ್ಬಂದಿ ಕಾವೇರಿ ಮೇಡಂ ಇದ್ದಾರಲ್ಲ ಅವರಿಗೆ ಅವರ ತಾಯಿ ಮೈಸೂರಿನಿಂದ ಬರೆದ ಪತ್ರ. ಕೂಡಲೆ ಬೆಲ್‌ಮಾಡಿ ಆಫೀಸ್ ಬಾಯ್ ಭದ್ರನನ್ನು ಕರೆದು ಮೇಡಮ್‌ಗೆ ಅವರ ಪತ್ರವನ್ನು ಕಳುಹಿಸಿಕೊಟ್ಟ. ಮೇಡಂ ಇನ್ನೂ ಬಂದಿರಲಿಲ್ಲವಾದುದರಿಂದ ಭದ್ರ ಪತ್ರವನ್ನು ಜೇಬಿನಲ್ಲಿ ಭದ್ರವಾಗಿರಿಸಿಕೊಂಡು ತುರ್ತಾಗಿ ಎಲ್ಲಿಯೊ ಹೊರಗೆ ಹೋದ. ಸ್ವಲ್ಪ ಹೊತ್ತಿನಲ್ಲೇ ಗುಡ್‌ಮಾರ್ನಿಂಗ್ ಹೇಳುತ್ತಾ ಮೇಡಮ್ ಒಳಕ್ಕೆ ಬಂದರು. ಆ ಕ್ಷಣಕ್ಕೆ ಅವಳನ್ನು ಕೀಟಲೆ ಮಾಡಬೇಕು ಎನ್ನಿಸಿ ಮೇಡಂ ತಮಗೊಂದು ಪತ್ರ ಬಂದಿತ್ತಲ್ಲ ಎಂದ. ''ಹೌದಾ ಎಲ್ಲಿ ಸಾರ್ ಕಾಗದ?!...'' ಎಂದು ಕೇಳಿದವಳಿಗೆ ''ಲವ್ ಲೆಟರ್ ಅಂತ ಕಾಣುತ್ತೆ. ಗುಲಾಬಿ ವರ್ಣದಲ್ಲಿತ್ತು...'' ಎಂದ. ''ಲವ್ ಲೆಟರ್ರಾ! ನನಗೆ!'' ಎಂದು ಭಯಭೀತಳಾಗಿ ಸಣ್ಣಗೆ ಬೆವರತೊಡಗಿದಳು. ''ಏನ್ ಸಾರ್ ನೀವೂ ಹೀಗೆ ಮಾತಾಡ್ತೀರಿ. ನಾನು ಅಂಥವಳಾ ಹೇಳಿ ಸಾರ್...'' ಎಂದು ಸಣ್ಣನೆ ರೋದಿಸತೊಡಗಿದಳು. ಅವಳ ದೊಡ್ಡ ಕಣ್ಣುಗಳಲ್ಲಿ ನೀರಾಡಿದಾಗ ಛೇ ತಾನು ಕೀಟಲೆ ಮಾಡಬಾರದಾಗಿತ್ತು ಎನಿಸಿತು. ಸ್ವಲ್ಪ ಹೊತ್ತು ಮೌನ. ''ಸಾರ್ ಕಾಗದ ಎಲ್ಲಿ...'' ಎಂದು ಅವಳು ಮತ್ತೆ ಕೇಳಿದಾಗ ಅವಳ ಧ್ವನಿ ಗೊಗ್ಗರು ದನಿಯಾಗಿತ್ತು. ''ಇರಿ. ಸ್ವಲ್ಪ ಇರಿ. ಕಾಗದ ಭದ್ರನಲ್ಲಿ ಇದೆ. ಅವನು ಆಚೆ ಹೋಗಿದ್ದಾನೆ. ಲವ್ ಲೆಟರ್ ಬಂದಿದೆ ಅಂದ್ರೆ ಅಷ್ಟೇಕೆ ಆತಂಕ ಮಾಡಿಕೊಳ್ತೀರಿ. ಇವೆಲ್ಲ ವಯೊಸಹಜ. ಸ್ವಲ್ಪ ಸುಧಾರಿಸಿಕೊಳ್ಳಿ. ಕಾಫಿ ಕುಡಿಯುತ್ತೀರಾ?'' ಎಂದ. ''ಬೇಡ ಸಾರ್...'' ಎಂದು ಅವಳು ತನ್ನ ಸೀಟಿನತ್ತ ಹೋದಳು. ನಂತರ ತನ್ನ ಕೆಲಸದ ತರಾತುರಿಯಲ್ಲಿ ಅವನು ಆ ಕಾಗದದ ಕತೆಯನ್ನು ಮರೆತುಬಿಟ್ಟಿದ್ದ. ಆದರೆ ಮಧ್ಯಾಹ್ನ ಊಟದ ಹೊತ್ತಿಗೆ ನಗುತ್ತಾ ಬಂದ ಕಾವೇರಿ ''ಏನ್ಸಾರ್ ಅದೆಷ್ಟು ಹೆಸರಿಸಿ ಬಿಟ್ಟಿದ್ರಿ. ಅಮ್ಮ ಬರೆದ ಕಾಗದವನ್ನು ಲವ್ ಲೆಟರ್ ಅನ್ನೋದಾ...'' ಅಂದಳು. ''ಯಾಕ್ರೀ ಅಮ್ಮನ ಪ್ರೀತಿ ಲವ್ವಲ್ಲವೇ. ಅವಳಿಗೆ ನಿಮ್ಮನ್ನು ಲವ್ ಮಾಡೋಕೆ ಆಗಲ್ಲವೇ ಅಥವಾ ನಿಮ್ಮನ್ನು ಲವ್ ಮಾಡೋಕೆ ಹುಡುಗನೇ ಆಗಬೇಕಾ...'' ಎಂದ. ಕಾವೇರಿ ನಾಚಿ ನೀರಾದಳು. ಅಲ್ಲಿಂದ ಅವಳು ಹೊರಟಾಗ 'ಕಾವೇರಿ ಏಕೆ ಓಡುವೆ. ನನ್ನಲ್ಲಿ ಪ್ರೀತಿ ಇಲ್ಲವೇ...' ಎಂದು ಹಾಡಿಕೊಳ್ಳುತ್ತಾ ಅವನು ಈಚೆ ಬಂದ.

7. ಇರೊ ವಿಚಾರ

ಮೊನ್ನೆ ಒಂದು ಬಸ್ಸಿನ ಮೇಲೆ ಯಾರೊ ಕಿಡಿಗೇಡಿಗಳು ಕೆಲವು ಅಕ್ಷರಗಳನ್ನು ಅಳಿಸಿ ಹಾಕಿರುವುದನ್ನು ನೋಡಿದೆ. ಕೂಡಲೆ ಛೇ ಅವರನ್ನು ಕಿಡಿಗೇಡಿಗಳು ಅಂತ ಅಂದುಕೊಂಡೆನಲ್ಲ ಅಂತ ಬೇಸರವಾಯಿತು. ಅವಳು ಒಳ್ಳೆಯ ಕೆಲಸವನ್ನೇ ಮಾಡಿದ್ದರು. ಅವರು 'ಈಶಾನ್ಯ ಕರ್ನಾಟಕ ಸಾರಿಗೆ' ಎಂಬ ವಾಕ್ಯದಲ್ಲಿ 'ನ್ಯ' ಮತ್ತು 'ಗೆ' ಎಂಬ ಎರಡು ಅಕ್ಷರಗಳನ್ನು ತೆಗೆದು ಹಾಕಿ 'ಈಶಾ ಕರ್ನಾಟಕ ಸಾರಿ' ಅಂತ ಉಳಿಸಿದ್ದರು. ಇದರಲ್ಲಿನ ವ್ಯಂಗ್ಯ ಮತ್ತು ವಿಷಾದ ಮನಸ್ಸಿಗೆ ಹೊಳೆದು ತುಂಬಾ ಬೇಸರವಾಯಿತು. ಇನ್ನು ಆ ಈಶನಿಗೆ ಹೇಗಾಗಿರಬೇಡ!

★★★

ವಿದ್ಯಮಾನಗಳು

– ಕು.ಶ.

ಈಗ ಎಲ್ಲರ ಗಮನ ಜರ್ಮನಿಯಲ್ಲಿನ ವಿಶ್ವ ಕಪ್ ಫುಟ್ಬಾಲ್ ಕಡೆಗೆ. ನಮ್ಮ ಒಬ್ಬ ಪ್ರಸಿದ್ಧ ಕವಿ ಜಗವೆಲ್ಲಾ ಮಲಗಿರಲು ಇವನೊಬ್ಬನೆದ್ದ ಎಂದು ಹಿಂದೆ ಹಾಡಿದ್ದರು, ಈಗ ಕಲ್ಕತ್ತದಲ್ಲಿ -ಜಗವೆಲ್ಲಾ ಎದ್ದಿರುವಾಗ ಇವನೊಬ್ಬ ಬಿದ್ದುಕೊಂಡ ಎಂದು ಅಲ್ಲಿ ಟೀವಿ ಚಾನಲ್ಲುಗಳಲ್ಲಿ ಫುಟ್ಬಾಲ್ ಪಂದ್ಯಗಳನ್ನು ನೋಡದವರನ್ನು ಹಾಸ್ಯ ಮಾಡುತ್ತಿದ್ದಾರಂತೆ! ಈ ಒಂದು ತಿಂಗಳು ಸುದ್ದಿಮಾಡುವವರು- ರೋನಾಲ್ಡಿನೋ. ಬೆಕ್‌ಹಂ, ಮೆಸ್ಸಿ, ಡ್ರೋಗ್ಬಾ, ಬಾಲಕ್, ಹೆನ್ರಿ ವಗೈರೆ ವಗೈರೆ. ಅವರಿಗೆಲ್ಲಾ, ಒಂದು ತಿಂಗಳಾದರೂ ನಮ್ಮ ರಾಜಕಾರಣಿಗಳನ್ನು ಪತ್ರಿಕೆಗಳ ಮೊದಲ ಪುಟಗಳಿಂದ ದೂರ ಇಟ್ಟಿದ್ದಕ್ಕಾಗಿ ನಾವೆಲ್ಲಾ ವಂದಿಸಲೇಬೇಕು. ಈಗ ಸಾವೂ ವಿಶ್ವವೆಲ್ಲಾ ಮಾಡುತ್ತಿರುವಂತೆ, ಜರ್ಮನಿಯ ಕ್ಲೋಸ್ ಹೊಡೆದ ಗೋಲು, ಆ ಗೋಲು ಮಾಡಿದ ಸಂತೋಷದಲ್ಲಿ ಅವನು ಹೊಡೆದ ಪಲ್ಟಿ ನೋಡಿ ಖುಷಿಪಡುತ್ತಿದ್ದೇವೆ. ಬ್ರಿಟನ್ನಿನ ಓವನ್‌ಗೆ ಆದ ಪೆಟ್ಟು ನೋಡಿ ಆತಂಕಪಡುತ್ತಿದ್ದೇವೆ. ವಿಶ್ವಕಪ್ ಪಂದ್ಯದಲ್ಲಿ ಒಂದು ಗೋಲ್ ಆದ ಆ ಕ್ಷಣದಲ್ಲಿ ಸಿಗುವ ಸಂತೋಷ (ಅಥವ ಆಗುವ ನಿರಾಶೆ) ಇನ್ನು ಯಾವ ಕ್ರೀಡೆಯಿಂದಲೂ ಸಿಗಲಾರದು. ಮಿಂಚಿನ ವೇಗದ ಫುಟ್ಬಾಲ್ ಎಂತಹ ಅದ್ಭುತ ಆಟ!

★★★★★

ಛಪ್ಪನ್ನಾರಕ್ಕಿಂತ ಇನ್ನೂ ಎಂಟು ಹೆಚ್ಚು, ಅಂದರೆ ಬರಾಬ್ಬರಿ ಅರವತ್ತುನಾಲ್ಕು ದೇಶಗಳಿಗೆ ಪ್ರವೇಶವಿರುವ ಈ ಹಣಾಹಣಿಯಲ್ಲಿ ಭಾಗವಹಿಸಲು ನಮಗೆ, ವರ್ಲ್ಡ್ ನಂಬರ್ ಟೂಗೆ ಅರ್ಹತೆಯಿಲ್ಲ. ಬೆಂಗಳೂರಿಗಿಂತ ಕಡಿಮೆ ಜನರಿರುವ ಟೋಗೊ ಅಲ್ಲಿ ಆಡುತ್ತಿದೆ. ಒಂದು ಸಮಾಧಾನದ ಸಂಗತಿ- ನಮ್ಮ ಪಕ್ಕದ ಪಾಕಿಸ್ತಾನದ್ದೂ ನಮ್ಮದೇ ಪಾಡು! ಅಂದಹಾಗೆ ಅಲ್ಲಿ ಬಾರತದವರು ಯಾರೂ ಇಲ್ಲವಲ್ಲ ಎಂದು ಪೇಚಾಡಬೇಡಿ. ನಮ್ಮ ಒಬ್ಬರು ಮಂತ್ರಿ ಮಹೋದಯರು (ಅವರೇ ನಮ್ಮ ದೇಶದ ಫುಟ್ಬಾಲ್ ಯಜಮಾನರು, ಬಹುಶಃ ನಮ್ಮ ಫುಟ್ಬಾಲ್‌ನ ಇಂದಿನ ದುಸ್ಥಿತಿಗೆ ಕಾರಣರಾದವರಲ್ಲಿ ಒಬ್ಬರು) ಯಾವುದೋ ಒಂದು ಪಂದ್ಯದ ಕಮೀಷನರ್ ಆಗಿದ್ದರಂತೆ. ಫುಟ್ಬಾಲ್ ಮೈದಾನದಲ್ಲಿ ಇಂತಹ ಕಮೀಷನರ್‌ಗಳು ಏನು ಮಾಡುತ್ತಾರೋ ಗೊತ್ತಿಲ್ಲ. ಟೇಪ್ ಕತ್ತರಿಸಬಹುದೇ? ಅಥವ ಶಾಂಪೇನ್ ಬಾಟಲಿಯ ಬಿರಟೆ ತೆಗೆಯಬಹುದೇ?

★★★★★

ಈಗ ಪತ್ರಿಕೆಗಳಲ್ಲಿ ಪ್ರತಿದಿನ ನೈಸ್ ನೈಸ್ ಸುದ್ದಿಗಳೇ. ಅಲ್ಲಿ ಆರು ರೈತರ ಆತ್ಮಹತ್ಯೆ, ಇಲ್ಲಿ ಹನ್ನೆರಡು ನಾಗರಿಕರ ಸಾವು, ಭಾರತ ತಂಡಕ್ಕೆ ಹೀನಾಯ ಸೋಲು, ಕರ್ನಾಟಕದ ಆಟಗಾರರಿಗೆ ನಿರಾಶೆ, ನಾಳೆ ನೀರಿಲ್ಲ, ಇವತ್ತು ಕರೆಂಟಿಲ್ಲ, ಇನ್ನೊಂದು ರಸ್ತೆ ಒನ್‌ವೇ ಆಗಿದೆ- ಇಂತಹ ಅನಿಷ್ಟದ ಸುದ್ದಿಗಳೇ ತುಂಬಿರುವ ಪತ್ರಿಕೆಗಳಲ್ಲಿ ಯಾವುದೇ ನೈಸ್ ಸುದ್ದಿ

ಋಷಿ ಕೊಡಬೇಕಾಗಿತ್ತು. ಆದರೆ ಈ ನೈಸ್ nice- ಸೊಗಸು, ನಾಜೂಕು, ಸ್ನೇಹಪರ, ಸೂಕ್ಷ್ಮ ಯಾವುದೂ ಅಲ್ಲ. NICE -ಸಂದಿ ವಗ್ಗೈರೆ ಎನ್ನುವುದು ನಿಮಗೇ ಗೊತ್ತು. ಮೊದಲ ಯೋಜನೆಯಂತೆ 2006ರಲ್ಲಿ ಅಂದರೆ ಈ ವರ್ಷವೇ ಈ ರಸ್ತೆಯಲ್ಲಿ ಬೆಂಗಳೂರಿನಿಂದ ಹೊರಟವರು 90 ನಿಮಿಷದಲ್ಲಿ ಮೈಸೂರು ತಲಪಲು ಸಾಧ್ಯವಾಗಬೇಕಾಗಿತ್ತಂತೆ. ಆದರೆ ನಮ್ಮ ರಾಜಕಾರಣಿಗಳು, 2016 ಏಕೆ 2026ರಲ್ಲೂ ನೈಸ್ ಒಂದು ರಸ್ತೆಯಾಗದೆ ಭಾರಿ ವಿವಾದವಾಗಿಯೇ ಉಳಿಯುವಂತೆ ನೋಡಿಕೊಳ್ಳುವ ಮಹಾಶಕ್ತಿಶಾಲಿಗಳು!

★★★★★

ಜೂನ್ 1, 2006 ಬಂತು, ಹಾಗೆಯೇ ಹೋಯಿತು. ಆದರೆ ಹತ್ತು ವರ್ಷದ ಹಿಂದೆ, ಆ ಶುಭ ದಿನದಂದೇ ಒಬ್ಬ ಕನ್ನಡಿಗ ಮೊಟ್ಟಮೊದಲ ಬಾರಿಗೆ ಭಾರತದ ಬಾದಶಾಹ ಆದದ್ದು ಎನ್ನುವುದನ್ನು ಯಾರೂ ಗಮನಿಸಿದಂತೆ ಕಾಣಿಸುವುದಿಲ್ಲ. ಅದು ಮಣ್ಣಿನ ಮಗನಿಗೆ ಬಯಸದೇ ಭಾಗ್ಯ ಬಂದ ದಿನ, ಅವರ ಜೀವನದ ಅತ್ಯಂತ ಸಂತೋಷದ ದಿನ, ಹಲವು ವರ್ಷಗಳ ಸಾಧನೆ ಪರಾಕಾಷ್ಠೆಗೆ ಮುಟ್ಟಿದ ದಿನ ಎಂದು ಬಹಳ ಜನ ಭಾವಿಸಿರಬೇಕು. ಆದರೆ ಅದು ಕುಟುಂಬದವರ ದುರ್ದಿನ ಎಂದು ಡೈನಾಸ್ಟಿಯ ಮುಖ್ಯ ಸದಸ್ಯರೊಬ್ಬರು ಈಚೆಗೆ ಹೇಳಿದ್ದಾರೆ. ನಿಜ, ಇಲ್ಲಿಯೇ ಇದ್ದಿದ್ದರೆ ಇನ್ನೂ ನಾಲ್ಕು ವರ್ಷ ನಿರಾತಂಕವಾಗಿ ಆಳಬಹುದಾಗಿತ್ತು. ಮತ್ತೆ ಗೆದ್ದುಬರಲು ಆಗುವಂತಹ ತಂತ್ರ ರೂಪಿಸಬಹುದಾಗಿತ್ತು, ಕುಟುಂಬದವರಿಗೆ ಇನ್ನಷ್ಟು ಸಹಾಯ ಮಾಡಬಹುದಾಗಿತ್ತು. ಅಲ್ಲಿಗೆ ಹೋಗಿ ಹತ್ತೇ ತಿಂಗಳಲ್ಲಿ ನಿಕಮ್ಮ ಎನಿಸಿಕೊಂಡು ಬ್ಯಾಕ್ ಟು ಪೆವಿಲಿಯನ್ ಆದದ್ದರಿಂದ ಬೇಜಾರಾಗಿರುವುದು ಸಹಜವೇ.

★★★★★

ಎರಡು ವಿಸ್ತರಣೆಗಳ ನಂತರ ಈಗ ಕರ್ನಾಟಕದಲ್ಲಿನ ಮಂತ್ರಿಗಳ ಸಂಖ್ಯೆ: ಮೂವತ್ತು. ಅವರಲ್ಲಿ ಪುರುಷರು: ಮೂವತ್ತು, ಮಹಿಳೆಯರು: ಸೊನ್ನೆ. ಆರು ದಶಕಗಳ ಹಿಂದೆ ಕೆ.ಸಿ. ರೆಡ್ಡಿಯವರ ಎಂಟು ಜನರ ಪುಟ್ಟ ಕ್ಯಾಬಿನೆಟ್ಟಿನಲ್ಲಿಯೂ ಮಹಿಳೆಯರಿಗೆ ಸ್ಥಾನವಿತ್ತು. ಆದರೆ ಮಹಿಳೆಯರು ಎಲ್ಲಾ ಕ್ಷೇತ್ರಗಳನ್ನೂ ಪ್ರವೇಶಿರುವಾಗ ಇಂದು, ಇಪ್ಪತ್ತೊಂದನೆಯ ಶತಮಾನದಲ್ಲಿ ಆರು ವರ್ಷ ಮುಗಿದಮೇಲೆ, ಅವರಿಗೆ ವಿಧಾನ ಸೌಧಕ್ಕೆ ನೋ ಎಂಟ್ರಿ. ನಾಚಿಕೆಗೇಡಿನ ವಿಷಯ. ಆದರೆ ನಾಚಬೇಕಾದವರು ಯಾರು? ದೋಸ್ತಿ ಅವರದ್ದೇ ತಪ್ಪು ಎಂದು ಇವರು, ಇವರದ್ದೇ ತಪ್ಪು ಎಂದು ಸುಲಭವಾಗಿ ನುಣುಚಿಕೊಳ್ಳಲು ಮುಕ್ತದ್ವಾರ ತೆರೆದಿದೆಯಲ್ಲ. ಇನ್ನೊಂದು ರೀತಿಯಲ್ಲಿ, ಇವತ್ತು ರಾಜಕೀಯ ಇಳಿದಿರುವ ಕೆಳಮಟ್ಟಕ್ಕೆ ನಮ್ಮ ನಾಡಿನ ಮಹಿಳೆಯರು ಇನ್ನೂ ಇಳಿದಿಲ್ಲವಲ್ಲ ಎಂದು ಸಮಾಧಾನ ಪಡಬಹುದೇನೋ.

★★★★★

ಉಕ್ತಿ - ಚಾಟೂಕ್ತಿ

- ಎನ್. ರಾಮನಾಥ್

'ಲೋಕಾಯುಕ್ತರಾಗಿ ಎರಡನೇ ಅವಧಿಗೆ ಮುಂದುವರೆಸಲು ಕಾನೂನಿನಲ್ಲಿ ಅವಕಾಶ ಇಲ್ಲ' - ಮು.ಮಂ.

ಸಚಿವರ ಭತ್ಯೆಗು ಮೀಸಲಾತಿಗು ಕಾಯಿದೆಯನ್ನೇ ತಿರುಚುವರು
ಲೋಕಾಯುಕ್ತರು ಕಂಟಕವಿವರಿಗೆ ತೊಳಗಿಪ ಕಾತುರದಿಂದಿಪರು

★★★

'ಬಿ.ಎಂ.ಐ.ಸಿ.ಗೆ ಗೌಡರ ಹೆಸರಿಡಲು ಸಿದ್ಧ' - ಖೇಣಿ

ಎಂದೂ ಮಲಗಿಪ ರಸ್ತೆಗೆ ಗೌಡರ ಹೆಸರನ್ನಿಡುವುದು Niceಉ
ಎಡಬಲದಲ್ಲಿಹ ಅಡ್ಡದಾರಿಗಳಿಗೆ ಅವರ ಬಂಧುಗಳ ನಾಮವು ಲೇಸು!

★★★

'ಗೃಹಸಚಿವರಾಗಿ ಮಾಜಿ ಉಪ ಮು.ಮಂ. ಪ್ರಕಾಶ್ ಆಯ್ಕೆ' - ಸುದ್ದಿ

ಹಿಮಾಲಯಪಂ ಹತ್ತಿದ ಧೀರಗೆ ಗುಡ್ಡವನೇರುವ ಲಾಲಸೆಯು
ಅಧೋಗಮನವು ಸೈ ಎನುವಂತದು ಉಚ್ಚರಿಗಲ್ಲವು ಭೂಷಣವು.

★★★

'ಬಸವ ಕಲ್ಯಾಣಃ ಕಾಲಮಿತಿಯಲ್ಲಿ ಕಾಮಗಾರಿ ಮುಗಿಸಲು ತಾಕೀತು' - ಸುದ್ದಿ

'ಕಾಲಮಿತಿ'ಯೆನೆ Foundation level ಎಂದನು ಗುತ್ತಿಗೆದಾರ
ನಿಗದಿತ ಹಣದಲಿ ಕಾಲುಭಾಗವು (25%) ಎಂದ ಲಂಚಗುಳಿ ಅಭಿಯಂತರ.

★★★

'ಮೂರು ತಿಂಗಳಲ್ಲಿ ಸರಕಾರ ಪತನ' - ಸಿದ್ಧರಾಮಯ್ಯ

ಭವಿಷ್ಯವಿರದ ಸರಕಾರಕ್ಕೆ ಆಗಾಗ್ಗೆ ಭವಿಷ್ಯ ನುಡಿಯುವರು
ಭೂತಗಳೇ ಈ ರಾಜಕಾರಣಿಗಳು ವರ್ತಮಾನವನು ಕೆಡಿಸುವರು.

★★★

'ವಿದ್ಯುತ್ ಉತ್ಪಾದನೆಗೆ VRL 315 ಕೋಟಿ ರೂ ಬಂಡವಾಳ' - ಸುದ್ದಿ

ಪತ್ರಿಕೆಯಿಂದ ಬೆಳಕು ಪಡೆಯಲು ಜನತೆಗೆ ವಿದ್ಯೆಯು ಇರಬೇಕು
ಉತ್ಪಾದಿತ ವಿದ್ಯುತ್ತಿನ ಬೆಳಕಿಗೆ ವೈರು ಬಲ್ಬು ಸ್ವಿಚ್ಚೇ ಸಾಕು.

★★★

'ಲೋಕಾಯುಕ್ತದ ಬಲೆಗೆ ಮೂವರು ಕುಬೇರರು' - ಸುದ್ದಿ

ಕುಬೇರರಿಗೆಂದೂ ಕು ಬೇರುಗಳು, ಭದ್ರತೆಯನ್ನು ಸಡಿಲಿಸವು
ಶಕ್ತಿಹೀನ ಲೋಕಾಯುಕ್ತರ ಶ್ರಮ ಅರಣ್ಯರೋಧನ ನಿರರ್ಥಕವು

★★★

ತುಂತುರು

- ದಂನಾಆ

- ವಾರ್ ಮೈನಸ್ ಶೂಟಿಂಗ್ = ಫುಟ್‌ಬಾಲ್.
- ದೇವೇಗೌಡರು ಕರ್ನಾಟಕದ ಆಸ್ತಿ ಎಂದರೆ ಕರ್ನಾಟಕ ದೇವೇಗೌಡರ ಆಸ್ತಿ ಎಂದೂ ಹೇಳಬಹುದೆ?
- ಹಗರಣಗಳಿಂದ ಹೆಸರಿಗೆ ಕಳಂಕ ತಟ್ಟಬಹುದು ಎಂದಿದ್ದರೂ ಅದೇನು ತೊಳೆಯಲಾಗದಂತಹದ್ದಲ್ಲ. ಬಹುಬೇಗನೆ ಅಂತಹ ಮಂದಿ ಮತ್ತೆ ಬಹಿರಂಗವಾಗಿ ಕಾಣಿಸಿಕೊಳ್ಳುತ್ತಾರೆ - ಮತ್ತಷ್ಟು ಬಿಳುಪಿರುವ ಕುರ್ತಾ ಪೈಜಾಮ ಧರಿಸಿ.
- ಗಾಂಧೀಜಿ ಹೇಳಿದ್ದು ಸತ್ಯವೇ ದೇವರು ಎಂದು. ದೇವರೇ ಸತ್ಯ ಎಂದಲ್ಲ.
- ಬಹುರಾಷ್ಟ್ರೀಯ ಕೋಕಾಕೋಲಾ ಪೇಯ ಮಾರುವ ಆಮೀರ್ ಖಾನ್ ವಸತಿಹೀನರಿಗಾಗಿ ಕಂಬನಿಯೂ ಮಿಡಿಯುತ್ತಾರೆ ಎಂದರೆ ಏನು ಹೇಳುವುದು? ಅವರ ಆದೆರಡು ನಿಲುವೂ ಸರಿ ಎನ್ನಬಹುದೆ? ಕೋಕಾಕೋಲಾ ಜನರಿಗೆ, ಸಹಾನುಭೂತಿ ವಸತಿಹೀನರಿಗೆ...
- ದಿಡೀರ್ ಎಂದು ಮೇಲ್ಜಾತಿಯನ್ನು ಗುರುತಿಸಲು ನೆರವಾಗುವ ಸಂಕೇತಗಳು ಈಗ ಜನಿವಾರ ಅಥವಾ ನಾಮ ಅಲ್ಲ. ಬದಲಿಗೆ ಲ್ಯಾಪ್‌ಟಾಪ್ ಮತ್ತು ಸ್ಟೆತಾಸ್ಕೋಪ್.
- ಭಾರತ ಒಂದು ತೀರಾ ಭಾವನಾತ್ಮಕ ದೇಶ. ಒಂದು ಕಿಡಿ ಜ್ವಾಲೆಯಾಗಿ ಉರಿಯತೊಡಗಬಹುದು; ಒಂದು ಮುಗುಳ್ನಗೆ ಮದುವೆಯಲ್ಲಿ ಪರ್ಯಾವಸನಗೊಳ್ಳಬಹುದು.
- ನಾವು ಭಾರತೀಯರು ಕೃತಿಚೌರ್ಯದಲ್ಲಿ ಸಿದ್ಧಹಸ್ತರು. ಚಾಣಕ್ಯನನ್ನು ನೋಡಿ. ಅವನು ಮೆಕೆವೆಲಿ ತಂತ್ರಗಳನ್ನೇ ಅನುಕರಿಸಿ ಮಾಡಿ ಭಾರತದ ಮೆಕೆವಿಲಿ ಎಂದೆನಿಸಿಕೊಂಡ; ಕಾಳಿದಾಸ ಷೇಕ್ಸ್‌ಪಿಯರ್‌ನನ್ನು ಕಾಪಿ ಮಾಡಿ ಭಾರತದ ಷೇಕ್ಸ್‌ಪಿಯರ್ ಎಂದು ಕರೆಯಿಸಿಕೊಂಡ; ಆರ್ಯಭಟ ನ್ಯೂಟನ್ನಿಂದ ಕದ್ದ; ನಮ್ಮ ಪೂರ್ವಿಕರು ರೂಪಿಸಿರುವ ವಿಮಾನಗಳು ರಷ್ಯಾದ ಶಿಕೋರ್ಸ್ಕಿಯ ವಿನ್ಯಾಸಗಳೇ ಅಲ್ಲವೆ? ವಿಜ್ಞಾನ, ಕಲೆ, ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಭಾರತೀಯರು ನೂರಾರು ವರ್ಷಗಳಿಂದ ಕದಿಯುತ್ತಲೇ ಇದ್ದಾರೆ. ಅಷ್ಟೇಕೆ ವಿ ಶಾಂತಾರಾಂ ಅವರ ಚಿತ್ರ ಆದ್ಮಿ ವಾಟರ್ಲೂ ಬ್ರಿಡ್ಜ್‌ನ ನಕಲೇ ಅಲ್ಲವೆ, ಆ ಹಾಲಿವುಡ್ ಚಿತ್ರಕ್ಕಿಂತಲೂ ಮೊದಲೇ ಅವರು ತಯಾರಿಸಿದ್ದರೂ ಸಹ?

ರಿ.ನಂ: 16692/1990-91 ಸ್ಥಾಪನೆ : 1990

ವಾಸವಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, 8ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು - 560 003. ✆ : 23447014

ಶಾಖೆಗಳು

ಸಂಜಯನಗರ ✆ : 23419780
ಮೂಡಲಪಾಳ್ಯ ✆ : 23111283
ನೆಲಮಂಗಲ ✆ : 7726666

ಬೆಂಗಳೂರು ಮಹಾನಗರದ ವಿಶ್ವಾಸನೀಯ ಸಹಕಾರಿ ಸಂಸ್ಥೆ

100 ಕೋಟಿ ವಾರ್ಷಿಕ ವಹಿವಾಟಿನತ್ತ......

ನಿಮ್ಮ ಶುಭೋದಯಕ್ಕೆ - ನಮ್ಮ ಯೋಜನೆಗಳು

★ ಕೇವಲ 78 ತಿಂಗಳುಗಳಲ್ಲಿ ನಿಮ್ಮ ಹಣ ದ್ವಿಗುಣಗೊಳ್ಳುತ್ತದೆ.
★ ನಿಮ್ಮ ನಿಶ್ಚಿತ ಠೇವಣಿಗಳ ಮೇಲೆ ಶೇ 10% ರಷ್ಟು ಗಳಿಸಿ.

ಭಾಗೀರಥಿ : ಗೌರಿಹಬ್ಬ, ಗರುಡ ಪಂಚಮಿ, ಯುಗಾದಿ ಹಬ್ಬದ ಸಂದರ್ಭದಲ್ಲಿ ನಿಮ್ಮ ಹೆಣ್ಣುಮಕ್ಕಳಿಗೆ ನಿಮ್ಮ ಪರವಾಗಿ ಮಂಗಳದ್ರವ್ಯಗಳಿಗಾಗಿ ಆಜೀವ ಪರ್ಯಂತ ಹಣವನ್ನು ಕಳುಹಿಸಿಕೊಡುವ ಯೋಜನೆ. ನೀವು ವಿನಿಯೋಗಿಸಬೇಕಾದ ಕನಿಷ್ಠ ಮೊತ್ತ ರೂ. 1,000-00 ಮಾತ್ರ.

**ನಿಮ್ಮ ಕಷ್ಟಾರ್ಜಿತ ಹಣ ನಮ್ಮಲ್ಲಿ ವಿನಿಯೋಗಿಸಿ.
ಸುಭದ್ರತೆಯೊಂದಿಗೆ ಹೆಚ್ಚು ಆದಾಯ ಗಳಿಸಿ.**

ಸದಸ್ಯರ ಠೇವಣಿಗಳಿಗೆ ಆದಾಯ ತೆರಿಗೆ ಕಡಿತದಿಂದ ವಿನಾಯಿತಿಯಿದೆ.

-: ಸೌಲಭ್ಯಗಳು :-

★ ವೈಯಕ್ತಿಕ ಸಾಲ ★ ವ್ಯಾಪಾರ ಸಾಲ ★ ವಾಹನ ಸಾಲ ★ ಅಡಮಾನ ಸಾಲ
★ ಗೃಹೋಪಯೋಗಿ ಸಾಲ ★ ಮನೆಕಟ್ಟಲು / ಕೊಳ್ಳಲು / ದುರಸ್ತಿಗಾಗಿ

-: ಆಡಳಿತ ಮಂಡಳಿ :-

ರಾ.ಪ. ರವಿಶಂಕರ್, ಸ್ಥಾಪಕರು - ಅಧ್ಯಕ್ಷರು, ಎಕ್ಸ್. ವಿ. ಶಾಂತಮೂರ್ತಿ - ಉಪಾಧ್ಯಕ್ಷರು,
ಎನ್. ಪಾರ್ವತಿ - ಕಾರ್ಯದರ್ಶಿ

ನಿರ್ದೇಶಕರು :

ಬಿ. ಕೃಷ್ಣಮೂರ್ತಿ, ಕೆ.ವಿ. ಸುರೇಶ್ ಕುಮಾರ್, ಪಿ.ಆರ್. ಸಂಜೀವಮೂರ್ತಿ, ವಿ.ವಿ.ಅಶ್ವತ್, ಎಚ್.ಬಿ. ಪ್ರಸಾದ್, ಎಸ್. ಸತೀಶ್, ಸಿ.ಎನ್. ನಾಗೇಶ್ವರ್ ರಾವ್, ಬಿ. ಎಸ್. ಗೋಪಿನಾಥ್, ಡಾ|| ಪಿ.ಎನ್. ಗೋವಿಂದರಾಜುಲು, ಮತ್ತು ಕೆ. ಎಂ. ವಿಶಾಲಾಕ್ಷಿ

CPMG / KA / BGW-544 / 2006-08 RNI-KAR KAN / 2005 / 15457
Mailing Date: 5th of every month / Mailed at Rajajinagar P.O.
[redacted]

MALLIGE

PERSONALISED COMPLETE MEDICAL CARE



Mallige Medical Centre

31/32, Crescent Road,
Bangalore – 560001
Phone: 22203333, Fax: 22265298
E-mail: info@mallige.com

Mahabodhi Mallige Hospital

T. Mariappa Road, 1st Block, Jayanagar,
Bangalore – 560011
Phone: 26565678, Fax: 26571516
Web: http://www.mallige.com

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999.
Editor: M. SHIVAKUMAR